# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಜನವರಿ 29, 2022

ಸಂಪುಟ : 48 ಸಂಚಿಕೆ : 259 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com


# ಶಾಲೆಗಳ ಪುನರಾರಂಭ ಮಾರ್ಗಸೂಚಿಗೆ ಕೇಂದ್ರದ ನಿರ್ಧಾರ

**ಶಿಕ್ಷಣ – ಆರೋಗ್ಯ ಪರಿಣಿತರ ಜೊತೆಗೂಡಿ ಕ್ರಮ**

ನವದೆಹಲಿ, ಜ. 28 – ಕೊರೊನಾದಿಂದ ಸಮಸ್ಯೆಗಳನ್ನು ಎದುರಿಸುತ್ತಿರುವ ಶಿಕ್ಷಣವನ್ನು ಸರಿ ದಾರಿಗೆ ತರುವ ಸಲುವಾಗಿ, ನೇರ ತರಗತಿಗಳ ಆರಂಭಕ್ಕೆ ಮಾರ್ಗಸೂಚಿ ರೂಪಿಸಲು ಕೇಂದ್ರ ಸರ್ಕಾರ ಮುಂದಾಗಿದೆ ಎಂದು ಮೂಲಗಳು ತಿಳಿಸಿವೆ.

ಕೊರೊನಾ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಶಾಲಾ ತರಗತಿಗಳು ಎಡವುತ್ತಾ ಸಾಗಿವೆ. ಕೊರೊನಾದ ಅಲೆಗಳು ಯಾವಾಗ ಮುಗಿಯಲಿವೆ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ. ಕೊರೊನಾ ಮುಗಿದರೂ, ಶಾಲೆಗಳ ಪುನರಾರಂಭ ಯಾವ ರೀತಿ ಇರಲಿದೆ ಎಂಬುದು ಸ್ಪಷ್ಟವಿಲ್ಲ.

ಈ ಹಿನ್ನೆಲೆಯಲ್ಲಿ ಕೊರೊನಾ ಶಿಷ್ಟಾಚಾರಗಳನ್ನು ಪಾಲಿಸುತ್ತಾ ನೇರ ತರಗತಿಗಳನ್ನು ಆರಂಭಿಸುವ ಮಾದರಿ ರಚಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ದೇಶಾದ್ಯಂತ ಪೋಷಕರು ನೇರ ತರಗತಿಗಳನ್ನು ಸ್ವಯಂ ಪ್ರೇರಿತ ಆಧಾರದ ಮೇಲೆ ಆರಂಭಿಸುವಂತೆ ಒತ್ತಾಯಿಸುತ್ತಿದ್ದಾರೆ. ಡಿಜಿಟಲ್ ಸೌಲಭ್ಯಗಳಿಲ್ಲದ ಮಕ್ಕಳು ಕಲಿಕೆಯಲ್ಲಿ ಹಿಂದೆ ಬೀಳುತ್ತಿದ್ದರೆ, ಸೌಲಭ್ಯ ಇರುವ ಮಕ್ಕಳು ಮೊಬೈಲ್ ವ್ಯಸನಕ್ಕೆ ಸಿಲುಕುತ್ತಿದ್ದಾರೆ ಎಂಬ ಕಳವಳಗಳು ಹೆಚ್ಚಾಗುತ್ತಿವೆ. ಈ ಹಿನ್ನೆಲೆಯಲ್ಲಿ ಆರೋಗ್ಯ ಹಾಗೂ ಶಿಕ್ಷಣ ವಲಯದ ಪರಿಣಿತರ (2ನೇ ಪುಟಕ್ಕೆ)

# ಡಾ. ಅಂಬೇಡ್ಕರ್ ಭಾವಚಿತ್ರಕ್ಕೆ ಅವಮಾನ

**ಮನವಿ ಸ್ವೀಕಾರಕ್ಕೆ ಬರಲಿಲ್ಲವೆಂದು ತಹಶೀಲ್ದಾರ್ ಮೇಲೆ ಹಲ್ಲೆ**

ಬೀದರ್, ಜ. 28 – ಅಂಬೇಡ್ಕರ್ ಭಾವಚಿತ್ರಕ್ಕೆ ಅವಮಾನ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮನವಿ ಸ್ವೀಕರಿಸಲು ವಿಳಂಬ ಮಾಡಿದ ತಹಶೀಲ್ದಾರ್ ಮೇಲೆ ಹಲ್ಲೆ ನಡೆಸಿದ ಘಟನೆ ಬೀದರ್ ಜಿಲ್ಲೆಯ ಹುಮನಾಬಾದ್‌ನಲ್ಲಿ ನಡೆದಿದೆ.

ಅಂಬೇಡ್ಕರ್ ಭಾವಚಿತ್ರಕ್ಕೆ ರಾಯಚೂರು ಜಿಲ್ಲಾ ನ್ಯಾಯಾಧೀಶರು ಅವಮಾನ ಮಾಡಿದ್ದಾರೆ ಎಂದು ಆರೋಪಿಸಿದ ಬಿ.ಎಸ್.ಪಿ. ಕಾರ್ಯಕರ್ತರು, ಹುಮನಾಬಾದ್ ತಹಶೀಲ್ದಾರ್ ಕಚೇರಿಗೆ ಮನವಿ ಸಲ್ಲಿಸಲು ತೆರಳಿದ್ದರು. ಆಗ ತಹಶೀಲ್ದಾರ್ ಡಾ. ಪ್ರದೀಪ್ ಕುಮಾರ್ ಹಿರೇಮಠ್ ಅವರು ಸಭೆಯೊಂದರಲ್ಲಿ ಪಾಲ್ಗೊಂಡಿದ್ದರು. ಇದರಿಂದಾಗಿ ಮನವಿ ಪಡೆಯುವುದು ವಿಳಂಬವಾಯಿತು. ಮನವಿ ಪಡೆಯಲು ಕಚೇರಿಯ ಸಿಬ್ಬಂದಿಯನ್ನು ತಹಸೀಲ್ದಾರ್ ಕಳಿಸಿದ್ದರು ಎನ್ನಲಾಗಿದೆ. (2ನೇ ಪುಟಕ್ಕೆ)

# ದಕ್ಷ ಆಡಳಿತದಿಂದ ಜನ ಕಲ್ಯಾಣ

## ಸರ್ಕಾರಕ್ಕೆ ಆರು ತಿಂಗಳು ತುಂಬಿದ ಸಂದರ್ಭದಲ್ಲಿ ಬೊಮ್ಮಾಯಿ ನಿಲುವು

ಬೆಂಗಳೂರು, ಜ. 28 - ಉತ್ತಮ, ದಕ್ಷ, ಪಾರದರ್ಶಕ ಆಡಳಿತದ ಮೂಲಕ ಜನ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ತಮ್ಮ ಸರ್ಕಾರಕ್ಕೆ ಆರು ತಿಂಗಳು ಪೂರೈಸಿದ ಹಿನ್ನೆಲೆಯಲ್ಲಿ ಭವ್ಯ ಭವಿಷ್ಯಕ್ಕಾಗಿ ಭರವಸೆಗಳ ಹೆಜ್ಜೆಗಳು ಎಂಬ ಕಿರುಹೊತ್ತಿಗೆಯನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಜನ ಕಲ್ಯಾಣವೇ ನನ್ನ ಧ್ಯೇಯ. ಈ ಮೂಲ ಮಂತ್ರದೊಂದಿಗೆ ನಾಡಿನ ಜನತೆಯ ಹಿತರಕ್ಷಣೆ ಮಾಡುವ ಸಂಕಲ್ಪ ನಮ್ಮದಾಗಿದೆ ಎಂದು ಹೇಳಿದ್ದಾರೆ.

ಇದುವರೆಗೂ ನನ್ನ ಸರ್ಕಾರ ಕೈಗೊಂಡಿರುವ ಜನಪರ ಕಾರ್ಯಕ್ರಮಗಳನ್ನು ಜನರ ಮುಂದಿಟ್ಟಿದ್ದೇನೆ. ಮುಂದಿನ ದಿನಗಳಲ್ಲಿ ರಾಜ್ಯದ ಜನತೆಯನ್ನು ಭವ್ಯ ಭವಿಷ್ಯದತ್ತ ಕೊಂಡೊಯ್ಯುವ ಭರವಸೆಯನ್ನು ನಾನು ನೀಡಬಯಸುತ್ತೇನೆ.

ಅಂತಹಕರಣ, ಅರಿವು, ಮಾನವೀಯತೆಯ ಗುಣಧರ್ಮದೊಂದಿಗೆ ತಮ್ಮ ನೇತೃತ್ವದ ಸರ್ಕಾರ ಕೆಲಸ ಮಾಡುತ್ತಿದೆ.

ಕಳೆದ ಆರು ತಿಂಗಳಲ್ಲಿ ಸವಾಲುಗಳನ್ನು ಎದುರಿಸುವ ಆತ್ಮವಿಶ್ವಾಸ ಮತ್ತು ಆತ್ಮಸ್ಥೈರ್ಯ ಮೂಡಿದೆ. ಮುಂದಿನ ದಿನಗಳಲ್ಲಿ ಜನರ ವಿಶ್ವಾಸಕ್ಕೆ ಚ್ಯುತಿಬಾರದಂತೆ ರಾಜ್ಯದ ಸಮಗ್ರ ಅಭಿವೃದ್ಧಿಯತ್ತ ಗಮನಹರಿಸಿ, ಬಲಿಷ್ಠ ಕರ್ನಾಟಕ ನಿರ್ಮಾಣ ತಮ್ಮ ಸಂಕಲ್ಪ ಎಂದರು.

ಜನಹಿತವೇ ಮುಖ್ಯ, ಜನರಿಂದ ಜನರಿಗೋಸ್ಕರ, ಜನರಿಗಾಗಿ ಈ ಸರ್ಕಾರವಿದೆ. ಕಳೆದ ಆರು ತಿಂಗಳಲ್ಲಿ ಸಾರ್ವತ್ರಿಕ ಹಿತ ಬಿಟ್ಟು ಬೇರೆ ಯಾವುದೇ ವೈಯಕ್ತಿಕ ಹಿತಾಸಕ್ತಿಯ ನಿರ್ಣಯ ಕೈಗೊಳ್ಳಲು ಅವಕಾಶ ಕೊಟ್ಟಿಲ್ಲ.



ಜನ ಕಲ್ಯಾಣಕ್ಕಾಗಿ ಸರ್ಕಾರ ಇದೆ ಎಂಬ ಅರಿವಿದೆ. ಹಾಗೆಯೇ ದುಡಿಯುವ ವರ್ಗಗಳಿಗೆ ಅದರ ಅವಕಾಶ ಕಲ್ಪಿಸುವ ಮೂಲಕ ಅವರ ಸ್ಥಿತಿಗತಿಗಳನ್ನು ಸುಧಾರಿಸುವ ಮಾನವೀಯ ಗುಣವನ್ನು ಸರ್ಕಾರ ಹೊಂದಿದೆ.

ತಮ್ಮದು ಸ್ಪಂದನಾಶೀಲ ಸರ್ಕಾರ ಎಂದು ಹೇಳಿಕೊಂಡ ಮುಖ್ಯಮಂತ್ರಿಯವರು, ಆರ್ಥಿಕ ಸ್ಥಿತಿ ಎಷ್ಟೇ ಕೆಟ್ಟದ್ದಾಗಿದ್ದರೂ ರೈತರು, ಬಡವರು, ದುಡಿಯುವ ವರ್ಗವನ್ನು ಕೈಬಿಟ್ಟಿಲ್ಲ. ನಾನು ಅಧಿಕಾರ ವಹಿಸಿಕೊಂಡ ತಕ್ಷಣ, (2ನೇ ಪುಟಕ್ಕೆ)

### ನನ್ನದು ಚುನಾವಣಾ ಬಜೆಟ್

ಬೆಂಗಳೂರು, ಜ.28 - ಮುಂಬರುವ ವಿಧಾನಸಭಾ ಚುನಾವಣೆ ಗಮನದಲ್ಲಿಟ್ಟುಕೊಂಡು ಬಜೆಟ್ ಮಂಡನೆ ಮಾಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ನಾನು ಮಂಡನೆ ಮಾಡುವ ಬಜೆಟ್ ಚುನಾವಣಾ ಬಜೆಟ್ ಆಗಿರುತ್ತದೆ. ರಾಜ್ಯದ ಆರ್ಥಿಕ ಸ್ಥಿತಿಯನ್ನು ಸದೃಢ ಮಾಡುವುದು ಒಂದು ಕಡೆಯಾದರೆ, ರಾಜ್ಯದ ಸಮಗ್ರ ಅಭಿವೃದ್ಧಿಗೆ ಎಲ್ಲ ವರ್ಗದ ಜನರಿಗೆ ನ್ಯಾಯ ಒದಗಿಸಲು ಯೋಜನೆ ರೂಪಿಸುತ್ತೇನೆ ಎಂದವರು ಹೇಳಿದ್ದಾರೆ.

ಎಲ್ಲ ಆಯಾಮಗಳನ್ನು ಮುಂದಿಟ್ಟುಕೊಂಡು ಜನಪರ ಚುನಾವಣಾ ಬಜೆಟ್ ಮಂಡಿಸಲು ಈಗಿನಿಂದಲೇ ಸಿದ್ದತೆ ಮಾಡಿಕೊಳ್ಳುತ್ತೇನೆ ಎಂದರು.

ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುವುದಿಲ್ಲವಾದರೂ ಎಲ್ಲರ ಹಾರೈಕೆಗಳು ಇನ್ನಷ್ಟು ಸ್ಫೂರ್ತಿಯಿಂದ ಮತ್ತು ಗಟ್ಟಿಯಾಗಿ (2ನೇ ಪುಟಕ್ಕೆ)

# ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಪೂರ್ಣ ಕ್ಯಾರಿ ಓವರ್

ಬೆಂಗಳೂರು, ಜ.28- ಕೊರೊನಾ ಸೋಂಕು ಹಾವಳಿಯ ಹಿನ್ನೆಲೆಯಲ್ಲಿ, 2021-22ನೇ ಸಾಲಿಗೆ ಅನ್ವಯವಾಗುವಂತೆ ಡಿಪ್ಲೋಮಾ ವಿದ್ಯಾರ್ಥಿಗಳಿಗೆ 'ಪೂರ್ಣ ಕ್ಯಾರಿ ಓವರ್'ಗೆ ಅನುಮತಿ ನೀಡಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಈ ಬಗ್ಗೆ ಶುಕ್ರವಾರ ಪತ್ರಿಕಾ ಪ್ರಕಟಣೆ ನೀಡಿರುವ ಅವರು, 'ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಗರಿಷ್ಠ 4 ವಿಷಯಗಳಿಗೆ ಮಾತ್ರ ಕ್ಯಾರಿ ಓವರ್ ಕೊಡುವ ಪದ್ಧತಿ ಇದೆ. ಆದರೆ, ಕೊರೊನಾ ಸೋಂಕು ವ್ಯಾಪಕವಾಗಿ ಹಬ್ಬಿದ್ದರಿಂದ ವಿದ್ಯಾರ್ಥಿಗಳಿಗೆ ಅನಾನುಕೂಲವಾಗಿದೆ. ಹೀಗಾಗಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪ್ರಸ್ತಕ ಶೈಕ್ಷಣಿಕ ವರ್ಷಕ್ಕೆ 'ಪೂರ್ಣ ಕ್ಯಾರಿ ಓವರ್'ಗೆ ಅವಕಾಶ ಕೊಡಲಾಗಿದೆ. ಈ ಸಂಬಂಧ ಉನ್ನತ ಶಿಕ್ಷಣ ಇಲಾಖೆಯಿಂದ ಆದೇಶ ಹೊರಡಿಸಲಾಗಿದೆ ಎಂದು ಹೇಳಿದ್ದಾರೆ.

# ಏರ್‌ಟೆಲ್‌ನಲ್ಲಿ ಗೂಗಲ್‌ನಿಂದ ಶತಕೋಟಿ ಡಾಲರ್ ಹೂಡಿಕೆ

ನವದೆಹಲಿ, ಜ. 28- ಭಾರತಿ ಏರ್‌ಟೆಲ್‌ನಲ್ಲಿ ಶತಕೋಟಿ ಡಾಲರ್ ಹೂಡಿಕೆ ಮಾಡಲು ಗೂಗಲ್ ಕಂಪನಿ ನಿರ್ಧರಿಸಿದೆ. ದೇಶದ ಎರಡನೇ ಅತಿ ದೊಡ್ಡ ಮೊಬೈಲ್ ಆಪರೇಟರ್ ಆಗಿರುವ ಏರ್‌ಟೆಲ್‌ನಿಂದ ಶೇ.1.28ರ ಪಾಲುಗಾರಿಕೆಯನ್ನು ಗೂಗಲ್ ಹೊಂದಲಿದೆ.

ಪ್ರತಿ ಷೇರಿಗೆ 734 ರೂ.ಗಳಂತೆ ಗೂಗಲ್ 700 ದಶಲಕ್ಷ ಪಾವತಿಸಿ ಶೇ.1.28ರ ಪಾಲುಗಾರಿಕೆ ಪಡೆಯಲಿದೆ. ಉಳಿದ ಮೊತ್ತವನ್ನು ಹಲವು ವರ್ಷಗಳಲ್ಲಿ ಹೂಡಿಕೆ ಮಾಡಲಾಗುವುದು.

ಕಳೆದ ಎರಡು ವರ್ಷಗಳಲ್ಲಿ ಭಾರತದಲ್ಲಿ ಗೂಗಲ್ ಮಾಡುತ್ತಿರುವ ಎರಡನೇ ಬೃಹತ್ ಹೂಡಿಕೆ ಇದಾಗಿದೆ. ಮುಂದಿನ 5ರಿಂದ 7 ವರ್ಷಗಳಲ್ಲಿ 10 ಶತಕೋಟಿ ಡಾಲರ್‌ಗಳನ್ನು ಭಾರತದಲ್ಲಿ ಹೂಡಿಕೆ ಮಾಡಲು ಗೂಗಲ್ ಉದ್ದೇಶಿಸಿದೆ. 2020ರ ಜುಲೈನಲ್ಲಿ ಮುಕೇಶ್ ಅಂಬಾನಿ ಅವರ ಜಿಯೋ ಪ್ಲಾಟ್‌ಫಾರ್ಮ್ಸ್‌ನ ಶೇ.7.73ರ ಪಾಲುಗಾರಿಕೆಯನ್ನು ಗೂಗಲ್ 4.5 (2ನೇ ಪುಟಕ್ಕೆ)

# ಜಿಲ್ಲೆಯಲ್ಲಿ ಅಂತರ್ಜಲ ಗಣನೀಯ ಏರಿಕೆ

## ಅಂತರ್ಜಲದ ಅತಿ ಬಳಕೆ ತಾಲ್ಲೂಕುಗಳಾದ ಚನ್ನಗಿರಿ, ಜಗಳೂರಲ್ಲೂ ಹೆಚ್ಚಳ



ಅಂತರ್ಜಲ ಅಳೆಯುವ ಹಳೆಯ ವಿಧಾನ



ಅಂತರ್ಜಲ ಅಳೆಯುವ ಡಿಜಿಟಲ್ ಉಪಕರಣ

ದಾವಣಗೆರೆ, ನ. 28 - ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಮಳೆ ಉತ್ತಮವಾಗಿರುವುದರಿಂದ ಅಂತರ್ಜಲ ಮಟ್ಟ ಗಣನೀಯವಾಗಿ ಏರಿಕೆಯಾಗಿದೆ. ಕೇಂದ್ರ ಸರ್ಕಾರ ನಡೆಸಿದ ಸಮೀಕ್ಷೆಯಲ್ಲಿ ಅಂತರ್ಜಲದ ಅತಿ ಬಳಕೆಯ ತಾಲ್ಲೂಕುಗಳು ಎಂದು ಗುರುತಿಸಲಾಗಿದ್ದ ಚನ್ನಗಿರಿ ಹಾಗೂ ಜಗಳೂರುಗಳಲ್ಲಿಯೂ ಅಂತರ್ಜಲ ಮಟ್ಟ ಏರುಮುಖವಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಮಳೆ ಪ್ರಮಾಣ ಹೆಚ್ಚಾಗಿರುವ ಜೊತೆಗೆ ನವೆಂಬರ್‌ವರೆಗೂ ಮಳೆಯಾಗುತ್ತಿದೆ. ನದಿ ನೀರನ್ನು ಕೆರೆಗಳಿಗೆ ತುಂಬಿಸುವ ಕಾಮಗಾರಿಗಳು ಪೂರ್ಣಗೊಳ್ಳುತ್ತಿರುವುದರಿಂದ ಅಂತರ್ಜಲದ ಮೇಲಿನ ಅವಲಂಬನೆ ಕಡಿಮೆಯಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2017 ಹಾಗೂ 2018ರಲ್ಲಿ ಮಳೆ ಪ್ರಮಾಣ ಕಡಿಮೆಯಾಗಿ ಅಂತರ್ಜಲ ಮಟ್ಟ ಜಿಲ್ಲಾದ್ಯಂತ ಕುಸಿತ ಕಂಡಿತ್ತು. ನಂತರದ ಮೂರು ವರ್ಷಗಳಲ್ಲಿ ಅಂತರ್ಜಲ ಮಟ್ಟ ಹೆಚ್ಚಿನ ಮಟ್ಟದಲ್ಲಿದೆ. 2021ರಲ್ಲಿಯೂ ನವೆಂಬರ್‌ವರೆಗೆ ಮಳೆ ಬಂದ ಕಾರಣದಿಂದ, 2022ರಲ್ಲಿಯೂ ಅಂತರ್ಜಲ ಮಟ್ಟ ಹೆಚ್ಚಿನ ಹಂತದಲ್ಲೇ ಮುಂದುವರೆಯಲಿದೆ ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ.

ಜಿಲ್ಲೆಯ ಒಟ್ಟು 48 ಬೋರ್‌ವೆಲ್ ಹಾಗೂ ತೆರೆದ ಬಾವಿಗಳಲ್ಲಿ ಪ್ರತಿ ತಿಂಗಳು ಅಂತರ್ಜಲ ಮಟ್ಟದ ಅಧ್ಯಯನ ಮಾಡಿ ವರದಿ ರೂಪಿಸಲಾಗುತ್ತದೆ. ಎಷ್ಟು ಮೀಟರ್ ಆಳದಲ್ಲಿ ನೀರು ಸಿಗುತ್ತದೆ ಎಂಬ ಆಧಾರದ ಮೇಲೆ ಅಂತರ್ಜಲ ಮಟ್ಟ ನಿರ್ಧಾರವಾಗುತ್ತದೆ. ನೀರು ಸಿಗುವ ಆಳ ತಳ ಮಟ್ಟಕ್ಕೆ ಹೋದಷ್ಟೂ ಅಂತರ್ಜಲ ಕಡಿಮೆಯಾಗುತ್ತದೆ ಎಂದು ಅಂತರ್ಜಲ ನಿರ್ದೇಶನಾಲಯದ ಜಿಲ್ಲಾ ಹಿರಿಯ ಭೂವಿಜ್ಞಾನಿ ಆರ್. ಬಸವರಾಜ್ ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ಪ್ರತಿ ಮೂರು ವರ್ಷಗಳಿಗೊಮ್ಮೆ ಅಂತರ್ಜಲ ಕುರಿತು ಅಧ್ಯಯನ ನಡೆಸುತ್ತದೆ. 2015 ಹಾಗೂ 2017ರಲ್ಲಿ ನಡೆಸಲಾದ ಅಧ್ಯಯನದಲ್ಲಿ ಜಗಳೂರು ಹಾಗೂ ಚನ್ನಗಿರಿಗಳು ಅಂತರ್ಜಲ (2ನೇ ಪುಟಕ್ಕೆ)

### ಅಂತರ್ಜಲಕ್ಕೆ ಡಿಜಿಟಲ್ ಅಳತೆಗೋಲು

**ಅಂತರ್ಜಲ ಮಟ್ಟ ಅಳೆಯುವುದನ್ನು ಡಿಜಿಟಲೀಕರಣಗೊಳಿಸಲಾಗುತ್ತಿದೆ. ಆರು ತಾಲ್ಲೂಕುಗಳ ತಲಾ ಒಂದು ಮಾಪನ ಕೇಂದ್ರ ಈಗಾಗಲೇ ಡಿಜಿಟಲೀಕರಣವಾಗಿದೆ.**

**ಹಿಂದಿನ ಪದ್ಧತಿಯಲ್ಲಿ ತಿಂಗಳಿಗೊಮ್ಮೆ ಟೇಪ್ ಹಿಡಿದು ಅಂತರ್ಜಲದ ಅಳತೆ ಮಾಡಲಾಗುತ್ತಿತ್ತು. ಡಿಜಿಟಲ್ ವಾಟರ್ ಲೆವೆಲ್ ರೆಕಾರ್ಡರ್ (ಡಿ.ಡಬ್ಲ್ಯೂ.ಎಲ್.ಆರ್.) ಪದ್ಧತಿಯಲ್ಲಿ ನೀರಿನ ಮಟ್ಟ ಸ್ವಯಂ ಚಾಲಿತವಾಗಿ ಅಳತೆಯಾಗಿ ನೇರವಾಗಿ ವೆಬ್ ತಾಣದಲ್ಲಿ ದಾಖಲಾಗುತ್ತದೆ. ಇದರಿಂದಾಗಿ ಅಂತರ್ಜಲ ಮಾಹಿತಿಯನ್ನು ಕ್ಷಣಾರ್ಧದಲ್ಲಿ ತಿಳಿಯಬಹುದು. ಅಂತರ್ಜಲದ ಏರಿಳಿತ ನಿರಂತರವಾಗಿ ದಾಖಲಾಗುತ್ತದೆ ಎಂದು ಹಿರಿಯ ಭೂ ವಿಜ್ಞಾನಿ ಆರ್. ಬಸವರಾಜ್ ಹೇಳಿದ್ದಾರೆ. ಕೇಂದ್ರ ಸರ್ಕಾರ ಅಟಲ್ ಭೂ ಜಲ್ ಯೋಜನೆಯ ಅನ್ವಯ ಜಗಳೂರು 22 ಹಾಗೂ ಚನ್ನಗಿರಿಗಳ 21 ಜಿಲ್ಲಾ ಪಂಚಾಯ್ತಿಗಳಲ್ಲಿ ಡಿಜಿಟಲ್ ಮಾಪಕಗಳನ್ನು ಅಳವಡಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಎಲ್ಲಾ ಮಾಪನ ಕೇಂದ್ರಗಳೂ ಡಿಜಿಟಲೀಕರಣವಾಗಲಿವೆ ಎಂದವರು ತಿಳಿಸಿದ್ದಾರೆ.**

# ಎಸ್‌ಸಿ, ಎಸ್‌ಟಿ ಬಡ್ತಿ ಮಾನದಂಡ ನಿಗದಿಗೆ ಸುಪ್ರೀಂ ಕೋರ್ಟ್ ನಕಾರ

**ಮಾನದಂಡ ನಿಗದಿಗಾಗಿ ಮಾಹಿತಿ ಸಂಗ್ರಹ ರಾಜ್ಯಗಳ ಕರ್ತವ್ಯ**

ನವದೆಹಲಿ, ಜ. 28 – ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಸರ್ಕಾರಿ ಹುದ್ದೆಗಳ ಬಡ್ತಿಗೆ ಸಂಬಂಧಿಸಿದಂತೆ ಯಾವುದೇ ಮಾನದಂಡ ನಿಗದಿ ಪಡಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಪ್ರಾತಿನಿಧ್ಯದಲ್ಲಿ ಕೊರತೆಯಾಗಿದ್ದರೆ ಆ ಬಗ್ಗೆ ಮಾಹಿತಿ ಸಂಗ್ರಹಿಸುವುದು ರಾಜ್ಯಗಳ ಕರ್ತವ್ಯ ಎಂದು ನ್ಯಾಯಮೂರ್ತಿ ನಾಗೇಶ್ವರ ರಾವ್ ಅವರ ನೇತೃತ್ವದ ಪೀಠ ಹೇಳಿದೆ.

ಮೀಸಲಾತಿಗಾಗಿ ಮಾನದಂಡ ಇರಬೇಕು ಎಂಬುದು ಜರ್ನೈಲ್ ಸಿಂಗ್ ಹಾಗೂ ನಾಗರಾಜ್ ಪ್ರಕರಣದಿಂದ ಸ್ಪಷ್ಟವಾಗಿದೆ. ಆದರೆ, ನಾವು ಯಾವುದೇ ಮಾನದಂಡ ನಿಗದಿ ಪಡಿಸುವುದಿಲ್ಲ ಎಂದು ನ್ಯಾಯಾಲಯ ಹೇಳಿದೆ.

ಪರಿಮಾಣಾತ್ಮಕ ಮಾಹಿತಿ ಸಂಗ್ರಹಿಸುವುದನ್ನು ನಾವು ಗೌರವಿಸುತ್ತೇವೆ. ರಾಜ್ಯಗಳು ಈ ಮಾಹಿತಿ ಸಂಗ್ರಹಿಸುವ ಬಾಧ್ಯತೆ ಹೊಂದಿವೆ ಎಂದು ನ್ಯಾಯಮೂರ್ತಿ ಗಳಾದ ಸಂಜೀವ್ ಖನ್ನಾ ಹಾಗೂ ಬಿ.ಆರ್. ಗವಾಯಿ ಅವರನ್ನು ಒಳಗೊಂಡ ಪೀಠ ಹೇಳಿದೆ. ಇಡೀ ಸೇವೆ ಇಲ್ಲವೇ ವರ್ಗದಲ್ಲಿ ಪ್ರಾತಿನಿಧ್ಯದ ಕೊರತೆಯ ಮಾಹಿತಿ ಸಂಗ್ರಹಿಸಬೇಕಿಲ್ಲ. ಯಾವ ಹುದ್ದೆಗಳಿಗೆ ಬಡ್ತಿ ನೀಡಲು ಉದ್ದೇಶಿಸಲಾಗಿದೆಯೋ ಅಲ್ಲಿ ಕೊರತೆಯ ಮಾಹಿತಿ ಇರಬೇಕು. ಎಲ್ಲಾ ಸೇವೆಗಳ ಮಾಹಿತಿಯನ್ನು ಸಂಗ್ರಹಿಸುವುದು ವ್ಯರ್ಥ ಎಂದೂ ನ್ಯಾಯಾಲಯ ಹೇಳಿದೆ.

ಕಳೆದ ವರ್ಷ ಅಕ್ಟೋಬರ್ 26ರಂದು ಮಾನದಂಡ ನಿಗದಿಗೆ ಸಂಬಂಧಿಸಿದ ತೀರ್ಪನ್ನು ನ್ಯಾಯಾಲಯ ಕಾಯ್ದಿರಿಸಿತ್ತು.

ಕೇಂದ್ರ ಹಾಗೂ ರಾಜ್ಯಗಳು ಬಡ್ತಿಯಲ್ಲಿ ಮೀಸಲಾತಿ ಕಲ್ಪಿಸುವುದಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಮಾನದಂಡ ನಿಗದಿ ಪಡಿಸಬೇಕು ಎಂದು ಕೇಂದ್ರ ಸರ್ಕಾರ ಈ ಹಿಂದೆ ಮನವಿ ಸಲ್ಲಿಸಿತ್ತು.

ಕೇಂದ್ರ ಸರ್ಕಾರದ ಪರವಾಗಿ ಮನವಿ ಸಲ್ಲಿಸಿದ್ದ ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್, ಪರಿಶಿಷ್ಟ ಜಾತಿ ಹಾಗೂ ಪಂಗಡದವರು ಸುಮಾರು ವರ್ಷಗಳಿಂದ ಮುಖ್ಯವಾಹಿನಿಯಿಂದ ಬದಿಗೊತ್ತಲ್ಪಟ್ಟಿದ್ದಾರೆ. ಮೀಸಲಾತಿಯ ಮೂಲಕ ಸಮಾನತೆ ತರಬೇಕಿದೆ. ದೇಶದ ಹಿತಕ್ಕಾಗಿ ಅವಕಾಶದಲ್ಲಿ (2ನೇ ಪುಟಕ್ಕೆ)

# ಜಿಲ್ಲೆಯಲ್ಲಿ 186 ಪಾಸಿಟಿವ್, 1 ಸಾವು

ದಾವಣಗೆರೆ, ಜ.28- ಜಿಲ್ಲೆಯಲ್ಲಿ 186 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, ದಾವಣಗೆರೆ ದೇವರಾಜ ಅರಸು ಬಡಾವಣೆಯ 76 ವರ್ಷದ ವೃದ್ಧೆಯೊಬ್ಬರು ಸೋಂಕಿನಿಂದಾಗಿ ಮೃತಪಟ್ಟಿದ್ದಾರೆ. ದಾವಣಗೆರೆ ತಾಲ್ಲೂಕಿನಲ್ಲಿ 55, ಹರಿಹರ 22, ಜಗಳೂರು 26, ಚನ್ನಗಿರಿ 18, ಹೊನ್ನಾಳಿ 58 ಹಾಗೂ ಹೊರ ಜಿಲ್ಲೆಯ 7 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. ಪ್ರಸ್ತುತ ಜಿಲ್ಲೆಯಲ್ಲಿ 2009 ಸಕ್ರಿಯ ಪ್ರಕರಣಗಳಿವೆ.

# ಮೂವರು ಅಂತರಾಜ್ಯ ಕಳ್ಳರ ಸೆರೆ

## 10 ಮನೆಗಳ್ಳತನ ಪ್ರಕರಣಗಳ ಪತ್ತೆ, 22.92 ಲಕ್ಷ ಮೌಲ್ಯದ ಚಿನ್ನಾಭರಣ, ನಗದು ವಶ



ದಾವಣಗೆರೆ, ಜ.28- 10 ಮನೆ ಗಳ್ಳತನ ಪ್ರಕರಣಗಳನ್ನು ಬೇಧಿಸಿರುವ ಹರಿಹರ ನಗರ ಪೊಲೀಸರು ಮೂವರು ಅಂತರಾಜ್ಯ ಕಳ್ಳರನ್ನು ಬಂಧಿಸಿ, ಒಟ್ಟು 22 ಲಕ್ಷದ 92 ಸಾವಿರ ರೂ. ಮೌಲ್ಯದ ಚಿನ್ನಾಭರಣ, ನಗದು ವಶಪಡಿಸಿಕೊಂಡಿದ್ದಾರೆ.

ಜ.14,2021 ರಂದು ಹರಿಹರ ನಗರ ಪೊಲೀಸ್ ಠಾಣೆಯಲ್ಲಿ ದಾಖಲಾದ ಮನೆಗಳ್ಳತನ ಪ್ರಕರಣದ ಬಗ್ಗೆ ತನಿಖೆ ಕೈಗೊಂಡಾಗ, ಮಹಾರಾಷ್ಟ್ರ ಮೂಲದ ಕಳ್ಳರ ತಂಡದ ಬಗ್ಗೆ ಸುಳಿವು ಸಿಕ್ಕಿತ್ತು. ಇದನ್ನು ಆಧರಿಸಿ ಕಳ್ಳರ ಪತ್ತೆಗೆ ಮ ಹಾರಾಷ್ಟ್ರಕ್ಕೆ ತೆರಳಿದ ಪೊಲೀಸ್ ಅಧಿಕಾರಿ ಗಳ ತಂಡ ಮಹಾರಾಷ್ಟ್ರದ ಮೂವರುಳ್ಳ ಈ ತಂಡವನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಹರಿಹರದ ಮನೆಗಳ್ಳತನ ಪ್ರಕರಣದೊಂದಿಗೆ ನಿಪ್ಪಾಣಿ, ಸಂಕೇಶ್ವರ, ಖಾನಾಪುರ, ಹಾವೇರಿ, ರಾಣೇಬೆನ್ನೂರು ಸೇರಿದಂತೆ ಒಟ್ಟು 10 ಮನೆಗಳ್ಳತನ ಮಾಡಿದ್ದ ಬಗ್ಗೆ ಬಂಧಿತ ಕಳ್ಳರು ಸತ್ಯ ಬಾಯಿ ಬಿಟ್ಟಿದ್ದಾರೆ. ಒಮ್ಮೆಯೂ ಸಹ ಈ ಮೂವರು ಕಳ್ಳರು ಪೊಲೀಸರ ಕೈಗೆ ಸಿಕ್ಕಿ ರಲಿಲ್ಲ ಎಂದು ಎಸ್ಪಿ ಸಿ.ಬಿ. ರಿಷ್ಯಂತ್ ನಗರದ ಜಿಲ್ಲಾ ಪೊಲೀಸ್ ಕಚೇರಿಯ ಲ್ಲಿಂದು ಸಂಜೆ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

16 ಲಕ್ಷದ 84 ಸಾವಿರ ರೂ. ಮೌಲ್ಯದ 421 ಗ್ರಾಂ ಬಂಗಾರದ ಆಭರಣಗಳು, 2 ಲಕ್ಷದ 16 ಸಾವಿರ ರೂ. ಮೌಲ್ಯದ 3,600 ಗ್ರಾಂ ತೂಕದ ಬೆಳ್ಳಿಯ ಆಭರಣಗಳು ಮತ್ತು 1 ಲಕ್ಷ ನಗದು ಹಾಗೂ 7 ಸಾವಿರ ಮೌಲ್ಯದ ವಾಚ್ ಹಾಗೂ 2 ಲಕ್ಷದ 85 ಸಾವಿರ ಮೌಲ್ಯದ ಒಂದು ಕಾರು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದರು.

ಹೆಚ್ಚುವರಿ ಪೊಲೀಸ್ ಅಧೀಕ್ಷಕ ರಾಮಗೊಂಡ ಬಸರಗಿ, ಸಹಾಯಕ ಪೊಲೀಸ್ ಅಧೀಕ್ಷಕಿ ಕನ್ನಿಕಾ ಸಿಕ್ರಿವಾಲ್, ಪೊಲೀಸ್ ಉಪಾಧೀಕ್ಷಕ ಬಿ.ಎಸ್. ಬಸವರಾಜ್, ರುದ್ರೇಶ್ ಮಾರ್ಗದರ್ಶನ ದಲ್ಲಿ ಹರಿಹರ ವೃತ್ತ ಸಿಪಿಐ ಯು. ಸತೀಶ್ (2ನೇ ಪುಟಕ್ಕೆ)


# ಬಿಜೆಪಿ ಆಸ್ತಿ 4,847 ಕೋಟಿ ರೂ., ಬಿಎಸ್‌ಪಿ ಆಸ್ತಿ 698 ಕೋಟಿ ರೂ.

ನವದೆಹಲಿ, ಜ. 28 – 2019-20ರ ಹಣಕಾಸು ವರ್ಷದಲ್ಲಿ ಬಿಜೆಪಿ ತನ್ನ ಆಸ್ತಿ 4,847.78 ಕೋಟಿ ರೂ. ಎಂದು ಘೋಷಿಸಿದೆ. ನಂತರದ ಸ್ಥಾನದಲ್ಲಿರುವ ಬಿ.ಎಸ್.ಪಿ. ಆಸ್ತಿ 698.33 ಕೋಟಿ ರೂ. ಹಾಗೂ ಕಾಂಗ್ರೆಸ್ ಆಸ್ತಿ 588.16 ಕೋಟಿ ರೂ. ಎಂದು ಎ.ಡಿ.ಆರ್. ವರದಿ ತಿಳಿಸಿದೆ.

ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎ.ಡಿ.ಆರ್.) 2019-20ರ ಸಾಲಿನಲ್ಲಿ ರಾಷ್ಟ್ರೀಯ ಹಾಗೂ ಪ್ರಾಂತೀಯ ಪಕ್ಷಗಳು ಹೊಂದಿದ್ದ ಆಸ್ತಿಗಳ ವರದಿ ರೂಪಿಸಿದೆ.

ವರದಿಯ ಪ್ರಕಾರ, ಏಳು ರಾಷ್ಟ್ರೀಯ ಹಾಗೂ 44 ಪ್ರಾಂತೀಯ ಪಕ್ಷಗಳ ಘೋಷಿತ ಆಸ್ತಿ ಕ್ರಮವಾಗಿ 6,988.57 ಕೋಟಿ ರೂ. ಹಾಗೂ 2,129.38 ಕೋಟಿ ರೂ. (2ನೇ ಪುಟಕ್ಕೆ)


### ಗೌಡರ ಶ್ರೀ ಜಿ. ಕೊಟ್ರೇಶಪ್ಪ ಗೋಣಿವಾಡ ನಿಧನ



ದಾವಣಗೆರೆ ತಾಲ್ಲೂಕು ಗೋಣಿವಾಡ ಗ್ರಾಮದ ವಾಸಿ

**ಗೌಡರ ಕೊಟ್ರೇಶಪ್ಪ**

ಇವರು ದಿನಾಂಕ 28.1.2022ರ ಶುಕ್ರವಾರ ಸಂಜೆ 7.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 75 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 29.1.2022ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಗೋಣಿವಾಡ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಲಿದೆ.

**ಇಂತಿ ದುಃಖತಪ್ತರು**
**ಶ್ರೀಮತಿ ಗೌಡರ ಕಲ್ಲಮ್ಮ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು. ಮೊ: 94480 70906**



# JOB OPPORTUNITY

Leading educational group in Karnataka with track record of more than 5 decades having excellent infrastructure facilities and attracts students from across Karnataka for degree courses is looking for deserving candidates to fill the following positions.

**STENOGRAPHER**

- Graduate in any discipline with computer knowledge
- Should have speed of not less than 100 wpm in English Shorthand and 40 wpm in English Typewriting
- Should have expertise in using MS Office

**ACCOUNTANT**

- Graduate in Commerce/Management
- 2-3 years of experience in Tally Software

Interested may send their resumes to
applyforjobsatdvg@gmail.com
within 5 days

# ಜಿಗಳಿ ಶಾಲೆಗೆ ಸ್ಮಾರ್ಟ್ ಕ್ಲಾಸ್ ಕೊಡುಗೆ



ಮಲೆಬೇನ್ನೂರು, ಜ.28- ಬೆಂಗಳೂರಿನ ಮಾರುತಿ ಮೆಡಿಕಲ್ಸ್ ಮಾಲೀಕರಾದ ಮಹೇಂದ್ರ ಮುಣೋತ ಅವರು ಹರಿಹರ ತಾಲ್ಲೂಕಿನ ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆ ಮಕ್ಕಳಿಗೆ 50 ಸಾವಿರ ನೋಟ್ ಬುಕ್‌ಗಳನ್ನು ಕೊಡುಗೆಯಾಗಿ ನೀಡಿದ್ದಾರೆ ಎಂದು ಬೆಂಗಳೂರಿನ ಹೆಲ್ಪಿಂಗ್ ಗ್ರೂಪ್ ಚಾರಿಟೆಬಲ್ ಟ್ರಸ್ಟ್‌ನ ಅಧ್ಯಕ್ಷ ನರಸಿಂಹಮೂರ್ತಿ ಹೇಳಿದರು.

ಜಿಗಳಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗಣರಾಜ್ಯೋತ್ಸವ ದಿನದಂದು ನೋಟ್ ಬುಕ್, ಜ್ಯಾಮಿಟ್ರಿ ಬಾಕ್ಸ್ ಹಾಗೂ ಲೇಖನಿ ಸಾಮಗ್ರಿ ಮತ್ತು ಪ್ರಸಿದ್ಧ ವ್ಯಕ್ತಿಗಳ ಪರಿಚಯ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಿ ಅವರು ಮಾತನಾಡಿದರು.

ಹರಿಹರ ತಾಲ್ಲೂಕು ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ನಕಲಿ ಕೊಠಡಿ ನಿರ್ಮಾಣ ಮತ್ತು ಈ ತಾಲ್ಲೂಕಿನ 25 ಸರ್ಕಾರಿ ಶಾಲೆಗಳಿಗೆ ಕಂಪ್ಯೂಟರ್ ಮತ್ತು 5 ಶಾಲೆಗಳಿಗೆ ಧ್ವನಿವರ್ಧಕ ವಿತರಿಸಲಾಗಿದೆ.

ಜಿಗಳಿ ಶಾಲೆಗೆ ಶಿಕ್ಷಕರ ಹಾಗೂ ಎಸ್‌ಡಿಎಂಸಿಯವರ ಕೋರಿಕೆಯಂತೆ ಸ್ಮಾರ್ಟ್ ಕ್ಲಾಸ್ ಸೌಲಭ್ಯ ಕಲ್ಪಿಸುವುದಾಗಿ ಭರವಸೆ ನೀಡಿದ ನರಸಿಂಹಮೂರ್ತಿ ಅವರು, ಸರ್ಕಾರಿ ಶಾಲೆಗಳ ಬಗ್ಗೆ ಎಲ್ಲರೂ ನಿಗಾ ವಹಿಸುವಂತೆ ಮನವಿ ಮಾಡಿದರು.

ಹರಿಹರ ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಹಾಗೂ ಧೂಳೆಹೊಳೆ ಸ. ಹಿ.ಪ್ರಾ. ಶಾಲೆ ಶಿಕ್ಷಕ ಶರಣ್‌ಕುಮಾರ್ ಹೆಗಡೆ ಮಾತನಾಡಿ, ಬೆಂಗಳೂರಿನ ಯೂತ್ ಫಾರ್ ಸೇವಾ ಸಂಸ್ಥೆಯವರು ಹರಿಹರ ತಾಲ್ಲೂಕಿಗೆ 250 ಜಾಮಿಟ್ರಿ ಬಾಕ್ಸ್ ಹಾಗೂ ಲೇಖನಿ ಸಾಮಗ್ರಿ, ಸ್ಯಾನಿಟೈಜರ್, ಮಾಸ್ಕ್ ಮತ್ತು ಕ್ರಿಬ್ಕೋ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ರಾಮಕೃಷ್ಣ ಅವರು ಪ್ರಸಿದ್ಧ ವ್ಯಕ್ತಿಗಳ 500 ಪರಿಚಯ ಪುಸ್ತಕಗಳನ್ನು ಕೊಡುಗೆಯಾಗಿ ನೀಡಿದ್ದಾರೆ ಎಂದರು.

ಶಿಕ್ಷಕ ಗುಡ್ಡಪ್ಪ ಅವರು ಗಣರಾಜ್ಯೋತ್ಸವ ಕುರಿತು ಮಾತನಾಡಿದರು.

ಎಸ್‌ಡಿಎಂಸಿ ಅಧ್ಯಕ್ಷ ಎಂ.ಆರ್. ನಾಗರಾಜ್, ಶಾಲಾ ಮುಖ್ಯ ಶಿಕ್ಷಕ ಕರಿಬಸಪ್ಪ, ಪತ್ರಕರ್ತ ಪ್ರಕಾಶ್ ಅವರು ದಾನಿಗಳನ್ನು ಸನ್ಮಾನಿಸಿದರು.

ಗ್ರಾ.ಪಂ. ಅಧ್ಯಕ್ಷರಾದ ಶ್ರೀಮತಿ ರೇಣುಕಾ ಪೂಜಾರ್ ನಾಗರಾಜ್, ಸಿ.ಎನ್. ಪರಮೇಶ್ವರಪ್ಪ, ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಜಿ.ಆರ್. ಚಂದ್ರಪ್ಪ, ಹೆಲ್ಪಿಂಗ್ ಗ್ರೂಪ್ ಟ್ರಸ್ಟ್ ಕಾರ್ಯದರ್ಶಿ ಮಂಜುನಾಥ್, ಸದಸ್ಯ ರಮೇಶ್, ಶಿಕ್ಷಕ ಟಿ.ಹೆಚ್. ಹನುಮಂತರೆಡ್ಡಿ, ಎಸ್‌ಡಿಎಂಸಿ ಉಪಾಧ್ಯಕ್ಷೆ ಸುನೀತಾ ನಾಗರಾಜ್, ಸದಸ್ಯರಾದ ಗಂಗಾಧರ ಚಾರಿ, ಬಿ. ಪ್ರಭಾಕರ್, ರತ್ನಮ್ಮ ಬಸವರಾಜ್, ಪ್ರಿಯಾ ಮಧು, ನೂರ್‌ಜಹಾನ್ ಚಮನ್‌ಸಾಹ್, ಕವಿತಾ ಚೌಡಪ್ಪ, ಪುಷ್ಪಾ ಮುನಿಯಪ್ಪ, ರೇಣುಕಾ ನಿಂಗಪ್ಪ ಮತ್ತು ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಶಿಕ್ಷಕ ಶ್ರೀನಿವಾಸ್‌ರೆಡ್ಡಿ ಸ್ವಾಗತಿಸಿದರು. ಶಿಕ್ಷಕ ನಾಗೇಶ್ ನಿರೂಪಿಸಿದರೆ, ಶಿಕ್ಷಕ ಮಲ್ಲಿಕಾರ್ಜುನ್ ವಂದಿಸಿದರು.

# ನಾಳೆ ಸರ್ವೋದಯ ದಿನ: ಮಾಂಸ ಮಾರಾಟ ನಿಷೇಧ

ದಾವಣಗೆರೆ, ಜ.28- ನಾಡಿದ್ದು ದಿನಾಂಕ 30 ರಂದು ಸರ್ವೋದಯ ದಿನಾಚರಣೆ ಇರುವುದರಿಂದ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರಾಣಿ ವಧೆ, ಪ್ರಾಣಿ ಮಾಂಸ ಹಾಗೂ ಮೀನಿನ ಮಾಂಸ ಮಾರಾಟವನ್ನು ನಿಷೇಧಿಸಲಾಗಿದೆ. ಅಂದು ಮಾಂಸ ಮಾರಾಟ ಮಾಡಬಾರದು. ತಪ್ಪಿದಲ್ಲಿ ಮಹಾನಗರ ಪಾಲಿಕೆ ಕಾಯ್ದೆ ಅನ್ವಯ ಮಾಂಸ ಉದ್ದಿಮೆದಾರರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ತಿಳಿಸಲಾಗಿದೆ.

# ಬಿಜೆಪಿ ಆಸ್ತಿ 4,847 ಕೋಟಿ, ಬಿಎಸ್‌ಪಿ ಆಸ್ತಿ 698 ಕೋಟಿ

**(1ನೇ ಪುಟದಿಂದ)** ಆಗಿದೆ.

ಬಿಜೆಪಿ ಆಸ್ತಿ 4,847.78 ಕೋಟಿ ರೂ., ಬಿ.ಎಸ್.ಪಿ. ಆಸ್ತಿ 698.33 ಕೋಟಿ ರೂ. ಹಾಗೂ ಕಾಂಗ್ರೆಸ್ ಆಸ್ತಿ 588.16 ಕೋಟಿ ರೂ. ಆಗಿದೆ. ಪ್ರಾಂತೀಯ ಪಕ್ಷಗಳ ಪೈಕಿ ಸಮಾಜವಾದಿ ಪಕ್ಷದ ಆಸ್ತಿ ಮೌಲ್ಯ 563.47 ಕೋಟಿ ರೂ., ಟಿ.ಆರ್.ಎಸ್. ಆಸ್ತಿ 301.47 ಕೋಟಿ ರೂ. ಹಾಗೂ ಎ.ಐ.ಎ.ಡಿ.ಎ.ಕೆ. ಆಸ್ತಿ 267.61 ಕೋಟಿ ರೂ. ಆಗಿದೆ ಎಂದು ಎ.ಡಿ.ಆರ್. ತಿಳಿಸಿದೆ.

# ಅಧಿವೇಶನದ ಅವಧಿ ಮೀರಿ ಅಮಾನತ್ತು ಸಂವಿಧಾನ ಬಾಹಿರ

## ಮಹಾರಾಷ್ಟ್ರದ 12 ಬಿಜೆಪಿ ಶಾಸಕರನ್ನು ವರ್ಷದ ಅವಧಿಗೆ ಅಮಾನತ್ತುಗೊಳಿಸಿರುವುದನ್ನು ರದ್ದುಗೊಳಿಸಿದ ಸುಪ್ರೀಂ

ನವದೆಹಲಿ, ಜ. 28 – ಬಿಜೆಪಿಯ 12 ಶಾಸಕರನ್ನು ಮಹಾರಾಷ್ಟ್ರ ವಿಧಾನಸಭೆಯ ಅಧಿವೇಶನದ ಒಂದು ಅವಧಿಗೂ ಮೀರಿ ಅಮಾನತ್ತುಗೊಳಿಸಿರುವುದು ಅಸಂವಿಧಾನಿಕ ಹಾಗೂ ಅಸಂಬದ್ಧ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಪೀಠಾಸೀನಾಧಿಕಾರಿಗಳ ಜೊತೆ ಶಾಸಕರು ದುರ್ವರ್ತನೆ ತೋರಿದ್ದರು ಎಂದು ಅವರನ್ನು ವರ್ಷದ ಅವಧಿಗೆ ಅಮಾನತ್ತುಗೊಳಿಸಲಾಗಿತ್ತು. ಇದನ್ನು ಪ್ರಶ್ನಿಸಿ ಶಾಸಕರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. 2021ರ ಜುಲೈನ ಮುಂಗಾರು ಅಧಿವೇಶನದ ನಂತರವೂ ಶಾಸಕರನ್ನು ಅಮಾನತ್ತುಗೊಳಿಸಿರುವುದನ್ನು ತಳ್ಳಿಹಾಕಲಾಗಿದೆ. ಇದು ಸಂವಿಧಾನ ಬಾಹಿರ, ಅಕ್ರಮ ಹಾಗೂ ಅಸಂಬದ್ಧ ಎಂದು ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ಅವರ ನೇತೃತ್ವದ ಪೀಠ ಹೇಳಿದೆ. ಪೀಠದಲ್ಲಿ ನ್ಯಾಯಮೂರ್ತಿಗಳಾದ ದಿನೇಶ್ ಮಹೇಶ್ವರಿ ಹಾಗೂ ಸಿ.ಟಿ. ರವಿಕುಮಾರ್ ಅವರಿದ್ದಾರೆ.

ವಿಧಾನಸಭಾಧ್ಯಕ್ಷ ಭಾಸ್ಕರ್ ಜಾಧವ್ ಅವರ ಚೇಂಬರ್‌ನಲ್ಲಿ ಶಾಸಕರು ದುರ್ವರ್ತನೆ ತೋರಿದ್ದಾರೆ ಎಂದು ಆರೋಪಿಸಿ ಶಾಸಕರನ್ನು ಕಳೆದ ವರ್ಷ ಜುಲೈ 5ರಂದು ಅಮಾನತ್ತುಗೊಳಿಸಲಾಗಿತ್ತು.

ಸಂಸದೀಯ ವ್ಯವಹಾರಗಳ ಸಚಿವ ಅನಿಲ್ ಪರಬ್ ಅವರು ಅಮಾನತ್ತಿನ ನಿಲುವಳಿ ಮಂಡಿಸಿದ್ದರು. ಇದಕ್ಕೆ ಧ್ವನಿಮತದ ಮೂಲಕ ಅಂಗೀಕಾರ ನೀಡಲಾಗಿತ್ತು.

ಒಂದು ವರ್ಷ ಕಾಲ ಅಮಾನತ್ತುಗೊಳಿಸುವುದರಿಂದ ಶಾಸಕರು ಜನರ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸುವುದರ ಮೇಲೆ ಗಂಭೀರ ಪರಿಣಾಮವಾಗುತ್ತದೆ. ಹೀಗಾಗಿ ಇದು ಉಚ್ಚಾಟನೆಗಿಂತ ತೀವ್ರ ಸ್ವರೂಪದ್ದಾಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಒಂದು ಸ್ಥಾನ ತೆರವಾದಾಗ ಆರು ತಿಂಗಳ ಒಳಗೆ ಭರ್ತಿ ಮಾಡಬೇಕೆಂಬ ಶಾಸನಾತ್ಮಕ ಬಾಧ್ಯತೆ ಇದೆ. ಶಾಸಕರೊಬ್ಬರು ಅನುಮತಿ ಪಡೆಯದೇ 60 ದಿನಗಳಿಗೂ ಹೆಚ್ಚು ಕಾಲ ಗೈರಾದರೆ ಅವರ ಸ್ಥಾನವನ್ನು ಖಾಲಿ ಆಗಿದೆ ಎಂದು ಘೋಷಿಸಬಹುದಾಗಿದೆ ಎಂಬುದರ ಬಗ್ಗೆ ನ್ಯಾಯಾಲಯ ಗಮನ ಸೆಳೆದಿದೆ.

# ಅಂತರ್ಜಲ ಗಣನೀಯ ಏರಿಕೆ

**(1ನೇ ಪುಟದಿಂದ)** ಅತಿ ಬಳಕೆ ತಾಲ್ಲೂಕುಗಳೆಂದು ಗುರುತಿಸಲ್ಪಟ್ಟಿದ್ದವು ಎಂದವರು ತಿಳಿಸಿದ್ದಾರೆ.

ಇತ್ತೀಚೆಗೆ ತಮ್ಮ ಕಚೇರಿಯಿಂದ ಅಂತರ್ಜಲ ಮಾಪನ ಮಾಡಿದಾಗ ಎರಡೂ ತಾಲ್ಲೂಕುಗಳಲ್ಲಿ ನೀರಿನ ಪ್ರಮಾಣ ಹೆಚ್ಚಾಗಿರುವುದು ಕಂಡು ಬಂದಿದೆ. 2017ರ ಡಿಸೆಂಬರ್‌ನಲ್ಲಿ ಚನ್ನಗಿರಿಯಲ್ಲಿ 9.66 ಮೀಟರ್ ಆಳದಲ್ಲಿ ಅಂತರ್ಜಲ ದೊರೆಯುತ್ತಿತ್ತು. ಇದು 2021ರ ಡಿಸೆಂಬರ್‌ನಲ್ಲಿ 2.90 ಮೀಟರ್‌ಗೆ ತಲುಪಿದೆ.

2017ರ ಡಿಸೆಂಬರ್‌ನಲ್ಲಿ ಜಗಳೂರಿನಲ್ಲಿ 19.81 ಮೀಟರ್ ಆಳದಲ್ಲಿ ಅಂತರ್ಜಲ ಸಿಗುತ್ತಿತ್ತು. 2021ರ ಡಿಸೆಂಬರ್‌ನಲ್ಲಿ 14.33 ಮೀಟರ್ ಮಟ್ಟದಲ್ಲಿ ಅಂತರ್ಜಲ ದೊರೆಯುತ್ತಿದೆ ಎಂದು ಬಸವರಾಜ್ ತಿಳಿಸಿದ್ದಾರೆ.

ದಾವಣಗೆರೆ ತಾಲ್ಲೂಕಿನಲ್ಲಿ ಅಂತರ್ಜಲ ಮಟ್ಟ 13.47 ಮೀಟರ್‌ಗಳಿಂದ 3.58 ಮೀಟರ್‌ಗೆ ತಲುಪಿದೆ. ಹರಿಹರದಲ್ಲಿ 4.65 ಮೀಟರ್‌ಗಳಿಂದ 3.18 ಮೀಟರ್‌ಗೆ ತಲುಪಿದೆ.

2017ರಲ್ಲಿ ಅವಿಭಜಿತ ಹೊನ್ನಾಳಿಯಲ್ಲಿ ಅಂತರ್ಜಲ ದೊರೆಯುವ ಮಟ್ಟ 6.02 ಮೀಟರ್ ಆಳದಲ್ಲಿತ್ತು. 2021ರಲ್ಲಿ ಹೊನ್ನಾಳಿಯಲ್ಲಿ 1.97 ಮೀಟರ್ ಆಗಿದ್ದರೆ, ನ್ಯಾಮತಿಯಲ್ಲಿ 4.13 ಮೀಟರ್ ಆಗಿದೆ ಎಂದು ಬಸವರಾಜ್ ಹೇಳಿದ್ದಾರೆ.

ಜಿಲ್ಲೆಯ ಆರು ತಾಲ್ಲೂಕುಗಳ ಅಂತರ್ಜಲ ಮಟ್ಟವನ್ನು ಪರಿಗಣಿಸಿದಾಗ, ಒಟ್ಟಾರೆ ಶೇ.40ರವರೆಗೂ ಅಂತರ್ಜಲ ಏರಿಕೆಯಾಗಿರುವ ಅಂದಾಜು ಸಿಗುತ್ತದೆ. ಜಿಲ್ಲೆಯಲ್ಲಿ ಪ್ರಸಕ್ತ ನಡೆಯುತ್ತಿರುವ ಕೆರೆ ತುಂಬಿಸುವ ಯೋಜನೆಗಳು ತ್ವರಿತವಾಗಿ ಜಾರಿಯಾದಲ್ಲಿ ಅಂತರ್ಜಲ ಮಟ್ಟ ಇನ್ನಷ್ಟು ಹೆಚ್ಚಿ, ಜನರಿಗೆ ವಿಶೇಷವಾಗಿ ರೈತರಿಗೆ ಅನುಕೂಲವಾಗುವುದರಲ್ಲಿ ಸಂಶಯವಿಲ್ಲ.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹಗೆದಿಬ್ಬ ಸರ್ಕಲ್, ಗಾಂಧಿನಗರ, ಅಂಬೇಡ್ಕರ್ ಸರ್ಕಲ್, ಮಹಾರಾಜಪೇಟೆ, ಚೌಕಿಪೇಟೆ, ವಿಜಯಲಕ್ಷ್ಮಿ ರಸ್ತೆ, ದೊಡ್ಡಪೇಟೆ, ಎಸ್‌ಕೆಪಿ ರಸ್ತೆ, ಹಳೇಪೇಟೆ ವೀರಭದ್ರೇಶ್ವರ ದೇವಸ್ಥಾನದ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ರೆಹಮಾನ್ ರಸ್ತೆ, ಮಂಡಕ್ಕಿ ಭಟ್ಟಿ 1 ನೇ ಕ್ರಾಸ್‌ವರೆಗೆ, ರಿಂಗ್‌ರಸ್ತೆ, ಸಿದ್ದರಾಮೇಶ್ವರ ಬಡಾವಣೆ, ಕಾರ್ಲ್‌ಮಾರ್ಕ್ಸ್ ನಗರ, ದೇವರಾಜ್ ಕ್ವಾರ್ಟರ್ಸ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

# ದಕ್ಷ ಆಡಳಿತದಿಂದ ಜನ ಕಲ್ಯಾಣ

**(1ನೇ ಪುಟದಿಂದ)** ಅಂಗವಿಕಲರು, ವಿಧವೆಯರು ಹಾಗೂ ಹಿರಿಯ ನಾಗರಿಕರ ಮಾಸಾಶನ ಏರಿಕೆ ಮಾಡಿದೆ. ಸಂಕಷ್ಟದಲ್ಲಿರುವ ರೈತರಿಗೆ ನೆರವಾದೆ. ಒಂದು ಕಡೆ ಆರೋಗ್ಯ ತುರ್ತು ಪರಿಸ್ಥಿತಿ, ಮತ್ತೊಂದು ಕಡೆ ಪ್ರವಾಹ ಇಷ್ಟಾದರೂ, ಜನರ ಜೀವನ ಉಳಿಸುವ ಜೊತೆಗೆ ಅವರ ಬದುಕನ್ನು ಉಳಿಸುವತ್ತ ಗಮನ ನೀಡಿದೆ.

ಇದರ ಜೊತೆ ಜೊತೆಯಲ್ಲೇ ರೈತರ ಶ್ರಮಕ್ಕೆ ಬೆಲೆ ಕೊಡಲು ಒತ್ತು ನೀಡಿದೆ. ನೈಸರ್ಗಿಕ ವಿಕೋಪದಿಂದ ಸಂಕಷ್ಟಕ್ಕೆ ಸಿಲುಕಿದಾಗ ಅವರ ಬದುಕು ಕಟ್ಟಿಕೊಳ್ಳಲು ಸರ್ಕಾರ ನೆರವಾಯಿತು ಎಂದವರು ಹೇಳಿದ್ದಾರೆ.

# ನನ್ನದು ಚುನಾವಣಾ ಬಜೆಟ್

**(1ನೇ ಪುಟದಿಂದ)** ಅಭಿವೃದ್ಧಿಯತ್ತ ಕರ್ನಾಟಕವನ್ನು ಕೊಂಡೊಯ್ಯಲು ಸಂಕಲ್ಪ ಮಾಡಿರುವುದಾಗಿ ತಿಳಿಸಿದರು.

ಕರ್ನಾಟಕದ ಸಾಮಾನ್ಯ ಜನರಿಂದ ಹಿಡಿದು ಪಕ್ಷದ ಹಿರಿಯರು ಪದಾಧಿಕಾರಿಗಳು, ರಾಷ್ಟ್ರಪತಿಗಳು, ಪ್ರಧಾನಿ ನರೇಂದ್ರ ಮೋದಿಯವರು ಶುಭ ಕೋರಿ ಟ್ವೀಟ್ ಮಾಡಿದ್ದಾರೆ.

ಕ್ಷೇತ್ರದ ಜನ ಶುಭಾಶಯಗಳನ್ನು ಕೋರಿದ್ದಾರೆ. ಅಮಿತ್ ಷಾ ಅವರು ಕರೆ ಮಾಡಿ ಶುಭಾಶಯ ತಿಳಿಸಿದ್ದಾರೆ. ಅವರೆಲ್ಲರಿಗೂ ಹೃದಯ ಪೂರ್ವಕ ಧನ್ಯವಾದಗಳನ್ನು ಅರ್ಪಿಸಿದ್ದೇನೆ. ಎಲ್ಲರ ಶುಭಾಶಯಗಳು ರಾಜ್ಯವನ್ನು ಸುಭಿಕ್ಷತೆಯತ್ತ ತೆಗೆದುಕೊಂಡು ಹೋಗಲು, ರಾಜ್ಯದ ಸಮಗ್ರ ಅಭಿವೃದ್ಧಿ ಮಾಡಲು ವಿಶೇಷವಾಗಿ ರಾಜ್ಯ ದಲ್ಲಿ ಬಡವರು, ರೈತರು ಮತ್ತು ಹಿಂದುಳಿದವರು, ಪರಿಶಿಷ್ಟ ಜಾತಿ ಮತ್ತು ಪಂಗಡ , ಮಹಿಳೆಯರು ಮತ್ತು ಯುವಕರ ಶ್ರೇಯೋಭಿವೃದ್ಧಿಗೆ ಕೆಲಸ ಮಾಡಲು ದೊಡ್ಡ ಶಕ್ತಿ ಮತ್ತು ಪ್ರೇರಣೆ ನೀಡಿದೆ ಎಂದರು.

# ಹರಿಹರ : 14 ಮಕ್ಕಳು, ನಾಲ್ವರು ಶಿಕ್ಷಕರಿಗೆ ಸೋಂಕು

ಹರಿಹರ, ಜ.28- ನಗರದ ಸೆಂಟ್ ಮೇರಿಸ್ ಪ್ರೌಢಶಾಲೆಯ 14 ಮಕ್ಕಳಿಗೆ ಮತ್ತು 4 ಶಿಕ್ಷಕರಿಗೆ ಕೊರೊನಾ ದೃಢಪಟ್ಟಿದ್ದು, ರೋಗಿಗಳಿಗೆ ಮನೆಯಲ್ಲಿ ಚಿಕಿತ್ಸೆ ಕೊಡುತ್ತಿದ್ದು, ಶಾಲೆಗೆ 7 ದಿನಗಳ ಕಾಲ ರಜಾ ಘೋಷಣೆ ಮಾಡಲಾಗಿದೆ ಎಂದು ಪ್ರಭಾರಿ ಮುಖ್ಯ ಶಿಕ್ಷಕ ಜಿ. ಶ್ರೀನಿವಾಸ್ ತಿಳಿಸಿದ್ದಾರೆ.



ಶಾಲೆ ಆವರಣ ಹಾಗೂ ಕೊಠಡಿಯಲ್ಲಿ ಸ್ವಚ್ಚತಾ ಕಾರ್ಯ ಮತ್ತು ಸ್ಯಾನಿಟೈಸರ್ ಸಿಂಪಡಣೆ ಮಾಡಲಾಗಿದೆ ಎಂದು ಹೇಳಿದರು.

# ಗೂಗಲ್‌ನಿಂದ ಶತಕೋಟಿ ಡಾಲರ್

**(1ನೇ ಪುಟದಿಂದ)** ಶತಕೋಟಿ ಡಾಲರ್ ಹೂಡಿಕೆ ಮೂಲಕ ಪಡೆದಿತ್ತು.

ಗೂಗಲ್ ಹೂಡಿಕೆಯ ಕಾರಣದಿಂದಾಗಿ ಏರ್‌ಟೆಲ್ ಕಂಪನಿಯು 5ಜಿ ಯೋಜನೆಗಳನ್ನು ದೇಶದಲ್ಲಿ ಜಾರಿಗೆ ತರಲು ಬಲ ಪಡೆಯಲಿದೆ.

# ಶಾಲೆಗಳ ಪುನರಾರಂಭ ಮಾರ್ಗಸೂಚಿಗೆ ಕೇಂದ್ರ ನಿರ್ಧಾರ

**(1ನೇ ಪುಟದಿಂದ)** ಜೊತೆಗೂಡಿ ಶಿಕ್ಷಣ ಸಂಸ್ಥೆಗಳಿಗೆ ಮಾದರಿಯೊಂದನ್ನು ರೂಪಿಸಲು ಕೇಂದ್ರ ಸರ್ಕಾರ ಮುಂದಾಗಿದೆ ಎಂದು ಶಿಕ್ಷಣ ಸಚಿವಾಲಯದ ಮೂಲಗಳು ತಿಳಿಸಿವೆ.

ಶಾಲೆಗಳು ತೆರೆಯಲು ಬಯಸಿದರೆ, ಶಿಕ್ಷಣ ಯಾವ ರೀತಿ ನಡೆಸಬೇಕು ಎಂಬ ಬಗ್ಗೆ ಮಾರ್ಗಸೂಚಿ ರೂಪಿಸಲಾಗುವುದು. ಆದರೆ, ಈ ವರದಿಗೆ ಇನ್ನೂ ಗಡುವು ವಿಧಿಸಿಲ್ಲ. ಕೊರೊನಾಗಿಂತಲೂ ಶಾಲೆಗಳನ್ನು ಮುಚ್ಚಿರುವುದರಿಂದ ಮಕ್ಕಳಿಗೆ ಹೆಚ್ಚು ಹಾನಿಯಾಗುತ್ತಿದೆ. ಶಾಲೆಗಳನ್ನು ಮುಚ್ಚಿರುವುದರಿಂದ ಒಂದಿಡೀ ಪೀಳಿಗೆಯ ಮಕ್ಕಳ ಮಾನಸಿಕ ಆರೋಗ್ಯದ ಮೇಲೆ ಪರಿಣಾಮವಾಗುತ್ತಿದೆ ಎಂದು ಯುನಿಸೆಫ್‌ನ ಇತ್ತೀಚಿನ ವರದಿ ತಿಳಿಸಿದೆ.

ಶಿಕ್ಷಣ ಕುಂಠಿತವಾಗುವ ಮಕ್ಕಳು ಜೀವನವಿಡೀ ಬಡತನಕ್ಕೆ ಸಿಲುಕುವ ಅಪಾಯ ಹೆಚ್ಚಾಗಿದೆ. ಈಗ ಶಾಲೆಗಳಿಗೆ ಬರುತ್ತಿರುವ ಮಕ್ಕಳೂ ಕಲಿಕೆಯಲ್ಲಿ ಹಿಂದೆ ಬಿದ್ದಿದ್ದಾರೆ ಎಂದು ಯುನಿಸೆಫ್ ಹೇಳಿದೆ. ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾನಿಲಯದ ವರದಿಯ ಪ್ರಕಾರ, ಶೇ.92ರಷ್ಟು ಮಕ್ಕಳು ಕನಿಷ್ಠ ಒಂದು ಭಾಷೆಯ ಕಲಿಕಾ ಸಾಮರ್ಥ್ಯ ಕಳೆದುಕೊಂಡಿದ್ದಾರೆ. ಶೇ.82ರಷ್ಟು ಮಕ್ಕಳು ಗಣಿತ ಕೌಶಲ್ಯ ಕಳೆದುಕೊಂಡಿದ್ದಾರೆ.

# ಅಂಬೇಡ್ಕರ್ ಭಾವಚಿತ್ರಕ್ಕೆ ಅವಮಾನ

**(1ನೇ ಪುಟದಿಂದ)** ಇದರಿಂದ ಆಕ್ರೋಶಗೊಂಡ ಬಿ.ಎಸ್.ಪಿ. ಕಾರ್ಯಕರ್ತರು, ತಹಶೀಲ್ದಾರ್ ಕಚೇರಿ ಸಭಾಂಗಣಕ್ಕೆ ನುಗ್ಗಿ ಕುರ್ಚಿಗಳನ್ನು ತೂರಾಡಿದರು. ತಹಶೀಲ್ದಾರ್ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಿದರು. ಗಾಯಗೊಂಡ ತಹಶೀಲ್ದಾರ್ ಹಿರೇಮಠ್ ಅವರು ತಾಲ್ಲೂಕು ಆಸ್ಪತ್ರೆಗೆ ದಾಖಲಾಗಿದ್ದಾರೆ. ಆಸ್ಪತ್ರೆಗೆ ಭೇಟಿ ನೀಡಿದ ಶಾಸಕ ರಾಜಶೇಖರ ಪಾಟೀಲ್, ಪರಿಷತ್ ಸದಸ್ಯ ಚಂದ್ರಶೇಖರ ಪಾಟೀಲ್ ಮತ್ತು ಭೀಮರಾವ್ ಪಾಟೀಲ್ ಮತ್ತಿತರರು ತಹಶೀಲ್ದಾರ್ ಆರೋಗ್ಯ ವಿಚಾರಿಸಿದ್ದಾರೆ. ತಹಶೀಲ್ದಾರ್ ಮೇಲೆ ನಡೆಸಲಾದ ಹಲ್ಲೆ ಖಂಡಿಸಿ, ಕಚೇರಿ ಸಿಬ್ಬಂದಿ ಪ್ರತಿಭಟನೆ ನಡೆಸಿದ್ದಾರೆ.

# ಬಡ್ತಿ ಮಾನದಂಡ ನಿಗದಿಗೆ ನಕಾರ

**(1ನೇ ಪುಟದಿಂದ)** ಸಮಾನತೆ ನೀಡಬೇಕಿದೆ ಎಂದು ಹೇಳಿದ್ದರು.

ನ್ಯಾಯಾಲಯ ಮಾನದಂಡಗಳನ್ನು ನಿಗದಿ ಪಡಿಸದೇ ಹೋದರೆ, ಹಲವಾರು ವ್ಯಾಜ್ಯಗಳು ಹುಟ್ಟಿಕೊಳ್ಳುತ್ತವೆ. ಯಾವ ಆಧಾರದ ಮೇಲೆ ಮೀಸಲಾತಿ ನೀಡಬೇಕು ಎಂಬ ವಿಷಯ ಅಂತ್ಯ ಕಾಣುವುದೇ ಇಲ್ಲ ಎಂದು ಅಟಾರ್ನಿ ಜನರಲ್ ಹೇಳಿದ್ದರು. ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಬಡ್ತಿ ಮೀಸಲಾತಿಗೆ ಸಂಬಂಧಿಸಿದ ವಿಷಯವನ್ನು ಮತ್ತೆ ವಿಚಾರಣೆಗೆ ಒಳಪಡಿಸುವುದಿಲ್ಲ. ಮೀಸಲಾತಿ ಜಾರಿ ಯಾವ ರೀತಿ ಇರಬೇಕು ಎಂಬುದು ರಾಜ್ಯಗಳಿಗೆ ಬಿಟ್ಟದ್ದು ಎಂದು ಸುಪ್ರೀಂ ಕೋರ್ಟ್ ತಿಳಿಸಿತ್ತು.

# ಹೆಣ್ಣಿಗೆ ಸೂಕ್ತ ಶಿಕ್ಷಣ, ಪ್ರೋತ್ಸಾಹ ನೀಡಿದಲ್ಲಿ ಸಮಾಜದ ಶಕ್ತಿಯಾಗಬಲ್ಲಳು

ದಾವಣಗೆರೆ, ಜ. 28- ಹೆಣ್ಣು ಸಮಾಜದ ಮತ್ತು ದೇಶದ ಸಂಪತ್ತು. ಸೂಕ್ತ ಶಿಕ್ಷಣ, ಮಾರ್ಗದರ್ಶನ ಹಾಗೂ ಪ್ರೋತ್ಸಾಹ ನೀಡಿದಲ್ಲಿ ಆಕೆ ಜಗತ್ತನ್ನೇ ಆಳಬಲ್ಲಳು ಎಂದು ಜಿಲ್ಲಾ ಲೀಡ್ ಬ್ಯಾಂಕ್ ವಿಭಾಗೀಯ ವ್ಯವಸ್ಥಾಪಕ ಸುಶ್ರುತ್ ಡಿ. ಶಾಸ್ತ್ರಿ ಅಭಿಪ್ರಾಯಪಟ್ಟಿದ್ದಾರೆ.

ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಅಂಗವಾಗಿ ಕ್ರಿಕೆಟ್ ಪಟು ರಕ್ಷಿತಾ ನಾಯಕ ಹಾಗೂ ಕರಾಟೆ ಪಟು ಡಿ. ಚಾಣಸ್ಯಾ ಅವರನ್ನು ಲೀಡ್ ಬ್ಯಾಂಕ್ ಕಛೇರಿಯಲ್ಲಿ ಸನ್ಮಾನಿಸಿ ಅವರು ಮಾತನಾಡಿದರು.



ಹೆಣ್ಣು ಮಗು ಎದುರಿಸುತ್ತಿರುವ ಅಸಮಾನತೆ, ಶಿಕ್ಷಣ, ಪೋಷಣೆ, ಬಾಲ್ಯ ವಿವಾಹ, ಕಾನೂನು ಹಕ್ಕುಗಳು ಮತ್ತು ವೈದ್ಯಕೀಯ ಆರೈಕೆ, ರಕ್ಷಣೆ, ಗೌರವದಂತಹ ಸಮಸ್ಯೆಗಳ ಬಗ್ಗೆ ಜನಜಾಗೃತಿಯನ್ನು ಉತ್ತೇಜಿಸುವುದು ಹೆಣ್ಣು ಮಕ್ಕಳ ಆಚರಣೆಯ ಮೂಲ ಉದ್ದೇಶವಾಗಿದೆ ಎಂದವರು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಕೆನರಾ ಬ್ಯಾಂಕ್ ಎಂ.ಎಸ್.ಎಂ.ಇ. ನ ವಿಭಾಗೀಯ ಪ್ರಬಂಧಕ ಅಶೋಕ ತೀಕೆ ಮಾತನಾಡಿದರು.

ರಕ್ಷಿತಾ ನಾಯಕ ಅವರ ತಂದೆ ರೈತ ಮುಖಂಡ ಹುಚ್ಚವ್ವನಹಳ್ಳಿ ಮಂಜುನಾಥ್ ಮಾತನಾಡಿ, ಹೆಣ್ಣು ಮಕ್ಕಳಿಗೆ ಪ್ರೋತ್ಸಾಹಿಸುವುದರ ಜೊತೆಗೆ ಕ್ರೀಡಾ ಪಟುಗಳಿಗೆ ಅಗತ್ಯವಿರುವ ಮೂಲಸೌಕರ್ಯಗಳನ್ನು ಸಹ ಒದಗಿಸಲು ಮನವಿ ಮಾಡಿದರು.

ಕೆ. ರಾಘವೇಂದ್ರ ನಾಯರಿ ನಿರೂಪಿಸಿದರು. ಎನ್. ರಾಮಮೂರ್ತಿ ಸಾಧಕರನ್ನು ಪರಿಚಯಿಸಿದರು. ಸಿ.ಕೆ. ರುದ್ರಾಕ್ಷಿ ಬಾಯಿ ಪ್ರಾರ್ಥಿಸಿದರು.

ಕಾರ್ಯಕ್ರಮದಲ್ಲಿ ಎಂ.ಎಂ. ಸಿದ್ದಲಿಂಗಯ್ಯ, ಜೆ. ಗೋಪಿಕೃಷ್ಣ, ದುರ್ಗೇಶ್ ಕುಮಾರ್ ದ್ವಿವೇದಿ, ಜ್ಯೋತಿರಂಜನ್ ಮಹಾಪಾತ್ರ, ಅಮರಜೀತ್ ಕುಮಾರ್, ಧನಂಜಯ ಪಾಡಿ, ವಿಶ್ವನಾಥ್ ಬಿಲ್ಲವ, ಕೆ. ಶಶಿಶೇಖರ್, ರೈತ ಮುಖಂಡ ಸಿದ್ದಪ್ಪ, ಪೋಷಕರುಗಳಾದ ಶ್ರೀಕಾಂತ್, ಉಷಾಶ್ರೀ, ಕರಾಟೆ ತರಬೇತುದಾರರಾದ ಪ್ರವೀಣ್, ಯುವರಾಜ್ ಹಾಗೂ ಶ್ರೀಧರ್, ನಿರಂಜನ್ ಉಪಸ್ಥಿತರಿದ್ದರು.

# ಪ್ರಾಮಾಣಿಕ ಸೇವೆ ದೇಶಕ್ಕೆ ನೀಡುವ ಕೊಡುಗೆ

## ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ



ದಾವಣಗೆರೆ, ಜ. 28- ದೇಶದ ಸ್ವಾತಂತ್ರ್ಯಕ್ಕೆ ತ್ಯಾಗ, ಬಲಿದಾನ ಮಾಡಿದ ಹಿರಿಯರ ಸೇವೆಯನ್ನು ಸ್ಮರಿಸುತ್ತಾ, ಪ್ರತಿಯೊಬ್ಬರೂ ತಮ್ಮ ಕರ್ತವ್ಯ ನಿರ್ವಹಿಸಲು ಆದ್ಯತೆ ನೀಡಬೇಕು. ಅದೇ ದೇಶಕ್ಕೆ ನೀಡುವ ಕೊಡುಗೆ ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಸಲಹೆ ನೀಡಿದ್ದಾರೆ.

ದಾವಣಗೆರೆ ವಿಶ್ವವಿದ್ಯಾನಿಲಯದ ಆವರಣದಲ್ಲಿ ಬುಧವಾರ 73ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಭಾರತವನ್ನು ಪ್ರಜಾಸತ್ತಾತ್ಮಕ ಗಣರಾಜ್ಯ ದೇಶವನ್ನಾಗಿ ನಿರ್ಮಿಸುವ ಮೂಲಕ ಜಗತ್ತಿಗೆ ಮಾದರಿಯಾಗುವಂತೆ ಮಾಡಲಾಗಿದೆ ಎಂದು ಹೇಳಿದರು.

ಪ್ರಜೆಗಳೇ, ಪ್ರಜೆಗಳಿಂದ ಪ್ರಜೆಗಳಿಗಾಗಿ ಆಡಳಿತ ನಡೆಸುತ್ತಿರುವ ಭಾರತದಲ್ಲಿ ಸಾಮಾನ್ಯ ವ್ಯಕ್ತಿಯೂ ದೇಶದ ಉನ್ನತ ಸ್ಥಾನಕ್ಕೇರಲು ಸಾಧ್ಯವಾಗುವಂತೆ ಮಾಡಿದೆ. ಇದೇ ಸ್ವತಂತ್ರ ಭಾರತದ ಸೌಂದರ್ಯ. ಇದನ್ನು ಉಳಿಸಿ, ಮುಂದುವರೆಸುವುದು ಪ್ರತಿಯೊಬ್ಬರ ಕರ್ತವ್ಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕುಲಸಚಿವರಾದ ಪ್ರೊ. ಗಾಯತ್ರಿ ದೇವರಾಜ್, ಪರೀಕ್ಷಾಂಗ ಕುಲಸಚಿವರಾದ ಪ್ರೊ. ಹೆಚ್.ಎಸ್. ಅನಿತಾ, ಡೀನ್ ಪ್ರೊ. ರಾಮಲಿಂಗಪ್ಪ, ಪ್ರೊ. ಕೆ.ವೆಂಕಟೇಶ್ ಭಾಗವಹಿಸಿದ್ದರು.

# ಹರಿಹರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಎರಡು ರ್‍ಯಾಂಕ್




ಹರಿಹರ, ಜ.28- ದಾವಣಗೆರೆ ವಿಶ್ವವಿದ್ಯಾನಿಲಯ ನಡೆಸಿದ ಸ್ನಾತಕ ಬಿ.ಎಸ್ಸಿ. ಪದವಿ ಪರೀಕ್ಷೆಯಲ್ಲಿ ಹರಿಹರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಎರಡು ರ್‍ಯಾಂಕುಗಳು ಲಭಿಸಿವೆ.

ಕಾಲೇಜಿನ ವಿದ್ಯಾರ್ಥಿಗಳಾದ ಕೆ.ಬಿ. ಬೀರೇಶ್ (ಶೇ. 92.5) 2 ನೇ ರ್‍ಯಾಂಕ್, ಎಸ್.ಟಿ. ಮೇಘಾ (ಶೇ. 91.6) 4 ನೇ ರ್‍ಯಾಂಕ್ ಪಡೆದಿದ್ದಾರೆ.

# ಮೂವರು ಅಂತರಾಜ್ಯ ಕಳ್ಳರ ಸೆರೆ

**(1ನೇ ಪುಟದಿಂದ)** ಕುಮಾರ್ ನೇತೃತ್ವದಲ್ಲಿ ಪಿಎಸ್ ಐಗಳಾದ ಸುನೀಲ ಬಿ. ತೇಲಿ, ಲತಾ ವಿ. ತಾಳೇಕರ್, ಮಂಜುನಾಥ ಕಲೆ ದೇವರು, ಯಾಸೀನ್ ವುಲ್ಲಾ, ಎಎಸ್ ಐ ನಾಗರಾಜ ಸುಣಗಾರ, ಹನುಮಂತ ಗೋಪನಾಳ, ಎಂ.ಎಸ್. ಶಿವರಾಜ್, ಮಂಜುನಾಥ ಕ್ಯಾತಮ್ಮನವರ್, ಎಸ್.ಬಿ. ಸಿದ್ದರಾಜು, ಹೆಚ್.ಸಿದ್ದೇಶ್, ಟಿ.ಪಿ.ಸತೀಶ್, ರಾಘವೇಂದ್ರ, ಉಮೇಶ್ ಬಿಸ್ನಾಳ್, ಶಾಂತರಾಜ್, ಅಕ್ರರ್, ನಾಗರಾಜ ಕುಂಬಾರ, ವೀರೇಶ್, ಮಾರುತಿ ಒಳಗೊಂಡ ತಂಡ ಪ್ರಕರಣಗಳ ಪತ್ತೆ ಹಚ್ಚಿದೆ.

## ಬಿ.ಕಲಪನಹಳ್ಳಿ ಬಸವರಾಜಪ್ಪ ನಿಧನ



ದಾವಣಗೆರೆ ತಾಲ್ಲೂಕು ಬಿ.ಕಲಪನಹಳ್ಳಿ ಗ್ರಾಮದ ವಾಸಿ ಸಣ್ಣಗೌಡ್ರ ಬಸವರಾಜಪ್ಪ (85) ಇವರು ದಿನಾಂಕ 28.1.2022ರ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ನಿಧನರಾದರು. ಮೃತರು ಐವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 29.1.2022ರ ಶನಿವಾರ ಮಧ್ಯಾಹ್ನ 12 ಗಂಟೆಗೆ ದಾವಣಗೆರೆ ತಾಲ್ಲೂಕು ಬಿ. ಕಲಪನಹಳ್ಳಿ ಗ್ರಾಮದಲ್ಲಿ ನೆರವೇರಲಿದೆ.

# ಹೆಣ್ಣು ಮಗುವಿಗೆ ಸಮಾನ ಅವಕಾಶ ಕಲ್ಪಿಸುವ ಚಿಂತನೆ ಅಗತ್ಯ : ಎಂ.ಜಿ.ಬಸವನಗೌಡ

ದಾವಣಗೆರೆ, ಜ. 28- ಹೆಣ್ಣು ಮಗುವಿನ ವಿರುದ್ಧ ನಡೆಯುತ್ತಿರುವ ತಾರತಮ್ಯವನ್ನು ಕಡ್ಡಾಯವಾಗಿ ತಿರಸ್ಕರಿಸಿ, ಹೆಣ್ಣು ಮಗುವಿಗೆ ಸಮಾಜದಲ್ಲಿ ಸಮಾನ ಅವಕಾಶವನ್ನು ಕಲ್ಪಿಸಿ ಕೊಡುವಲ್ಲಿ ಚಿಂತನೆ ನಡೆಸಬೇಕಾದ ಅಗತ್ಯವಿದೆ ಎಂದು ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿ ಎಂ.ಜಿ. ಬಸವನಗೌಡ ಅಭಿಪ್ರಾಯಪಟ್ಟರು.

ನಗರದ ರಾಘವೇಂದ್ರ ಹೈಟೆಕ್ ಪಿಯು ಕಾಲೇಜಿನಲ್ಲಿ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ ಹಾಗೂ ಶ್ರೀ ಶಾರದಾ ಮೆಡಿಕಲ್ ಅಕಾಡೆಮಿ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ 'ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹೆಣ್ಣು ಭ್ರೂಣ ಹತ್ಯೆಯಂತಹ ಸಾಮಾಜಿಕ ಪಿಡುಗನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಬೇಕು ಹಾಗೂ ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಗೆ ಸ್ಥಾನಮಾನ ನೀಡುವ ಮೂಲಕ ಲಿಂಗ ತಾರತಮ್ಯ ಹೋಗಲಾಡಿಸುವ ಅಗತ್ಯವಿದೆ ಎಂದು ಹೇಳಿದರು. ಭಾರತದ ಮಾಜಿ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನ ಮಂತ್ರಿ ಯಾಗಿ ಅಧಿಕಾರ ವಹಿಸಿಕೊಂಡ ಈ ದಿನದಂದು ದೇಶದ ಹೆಣ್ಣು ಮಕ್ಕಳನ್ನು ಗೌರವಿಸುತ್ತಿರುವುದಕ್ಕೆ ಅತೀವ ಸಂತಸವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶು ಪಾಲ ಡಾ. ಅನಿಲ್ ಕುಮಾರ್ ಶ್ಯಾಗಲೆ ಮಾತನಾಡಿ, ಇಂದು ಶಿಕ್ಷಣ ಕ್ಷೇತ್ರದಲ್ಲಿ ಹುಡುಗಿಯರದ್ದೇ ಮೇಲಗೈ. ಶೈಕ್ಷಣಿಕವಾಗಿ, ಕ್ರೀಡಾ ಕ್ಷೇತ್ರದಲ್ಲಿ, ಸಾಮಾಜಿಕ ಕ್ಷೇತ್ರದಲ್ಲಿ ಇಂದು ಮಹಿಳೆ ಪುರುಷರಿಗೆ ಸಮಾನವಾಗಿ ಯಶಸ್ಸು ಗಳಿಸುತ್ತಿರುವುದು ಹೆಮ್ಮೆಯ ವಿಷಯ ಎಂದು ತಿಳಿಸಿದರು. ತಾಯಿಯಾಗಿ, ಸೋದರಿಯಾಗಿ, ಹೆಂಡತಿಯಾಗಿ, ಮಗಳಾಗಿ ಸಂಸಾರದ ನೊಗವನ್ನು ಎಳೆಯುವಲ್ಲಿ ಮಹಿಳೆಯ ಪಾತ್ರ ದೊಡ್ಡದೆಂದು ತಿಳಿಸಿದರು.



ಕೇಂದ್ರದ ಯೋಜನೆಗಳಾದ ಬೇಟಿ ಬಚಾವೋ ಬೇಟಿ ಪಡಾವೋ, ಸುಕನ್ಯಾ ಸಮೃದ್ಧಿ ಯೋಜನೆಗಳ

### ರಾಘವೇಂದ್ರ ಕಾಲೇಜಿನಲ್ಲಿ 'ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ' ಕಾರ್ಯಕ್ರಮ

ಬಗ್ಗೆ ವಿವರವಾದ ಮಾಹಿತಿಯನ್ನು ಕೇಂದ್ರದ ಗೃಹ ವಿಜ್ಞಾನಿ ಡಾ. ಸುಪ್ರಿಯಾ ಪಿ. ಪಾಟೀಲ್ ನೀಡಿದರು.

ಶೈಕ್ಷಣಿಕ ಕ್ಷೇತ್ರದಲ್ಲಿ ಅಮೋಘ ಸಾಧನೆ ಮಾಡಿದ ಉಪನ್ಯಾಸಕರಾದ ಶ್ರೀಮತಿ ಲೀನಾ ಮೇಡಂ ಮತ್ತು ಪಿ.ಎಂ. ಇಂದುಶ್ರೀ ಅವರಿಗೆ ಗೌರವ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಹಿರಿಯ ಉಪನ್ಯಾಸಕರಾದ ಬಸವರಾಜ, ಹರೀಶ್, ಯಶಸ್ವಿನಿ ಹಿರೇಮಠ, ವಿಶ್ವನಾಥ್, ನಮಿತಾ ಹಾಗೂ ಮತ್ತಿತರಿದ್ದರು.

# ಸ್ವಾತಂತ್ರ್ಯಕ್ಕೆ ಬೋಸ್‌ರ ಕ್ರಾಂತಿ ಕಾರಣ



**ಜಯನಗರದಲ್ಲಿನ ಗಣರಾಜ್ಯೋತ್ಸವದಲ್ಲಿ ಬಿಜೆಪಿ ಹಿರಿಯ ಮುಖಂಡರೂ ಆದ ವಕೀಲ ಎ.ವೈ. ಪ್ರಕಾಶ್**

ದಾವಣಗೆರೆ, ಜ. 28- ಗಾಂಧೀಜಿಯವರ ಅಹಿಂಸಾ ಚಳುವಳಿಯಿಂದ ಮಾತ್ರ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿಲ್ಲ. ಸುಭಾಷ್‌ಚಂದ್ರ ಬೋಸ್ ಅವರ ಕ್ರಾಂತಿಯೂ ಕಾರಣವಾಗಿದೆ ಎಂದು ಬಿಜೆಪಿ ಹಿರಿಯ ಮುಖಂಡರೂ ಆದ ವಕೀಲ ಎ. ವೈ. ಪ್ರಕಾಶ್ ತಿಳಿಸಿದರು.

ಇಲ್ಲಿನ ಜಯನಗರ ಸಿ ಬ್ಲಾಕ್‌ನ ನಾಗರಿಕ ಹಿತರಕ್ಷಣಾ ಸಮಿತಿಯಿಂದ ಕದಂಬ ಉದ್ಯಾನವನದಲ್ಲಿ ಆಯೋಜಿಸಿದ್ದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 1947ರಲ್ಲಿ ಬ್ರಿಟಿಷರು ದೇಶ ಬಿಟ್ಟು ಹೋಗುವಾಗ ಸ್ವಾತಂತ್ರ್ಯ ನೀಡಿದರು. ಆದರೆ ಅದಕ್ಕಿಂತ ಮೂರು ವರ್ಷ ಮುಂಚೇನೆ ನಿಮ್ಮ ರಕ್ತ ಕೊಡಿ, ನಿಮಗೆ ಸ್ವಾತಂತ್ರ್ಯ ಕೊಡಿಸುತ್ತೇನೆ ಎನ್ನುತ್ತಾ, ಯುವಕರನ್ನು ತಮ್ಮೆಡೆಗೆ ಸೆಳೆದುಕೊಂಡು ಕ್ರಾಂತಿಕಾರಿ ಹೋರಾಟಗಳ ಮೂಲಕ ದೇಶದ ಜನತೆಯನ್ನು ಬಡಿದೆಬ್ಬಿಸಿ, ಸ್ವಾತಂತ್ರ್ಯಕ್ಕೆ ಹೋರಾಡಿ ದವರು ಸುಭಾಷ್ ಚಂದ್ರ ಬೋಸ್ ಎಂದರು.

ಅವರು ಸಿಂಗಾಪುರದಲ್ಲಿ ಪ್ರಥಮ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿ, ಭಾರತ ಸರ್ಕಾರವನ್ನು ರಚಿಸಿದರು. ಭಾರತ ರಾಷ್ಟ್ರೀಯ ಸೇನೆ ಸ್ಥಾಪಿಸುವ ಮೂಲಕ ಪ್ರತ್ಯೇಕ ಸೇನೆ, ಪ್ರತ್ಯೇಕ ಕರೆನ್ಸಿ ಹೀಗೆ ಅನೇಕ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತರಲು ಪ್ರಯತ್ನಿಸಿದರು. ಅವರ ಹೋರಾಟಗಳಿಗೆ ಆಗಿನ ಅಹಿಂಸಾವಾದಿಗಳು ಎನ್ನುವವರು ಬೆಂಬಲಿಸಲಿಲ್ಲ. ಒಂದು ವೇಳೆ ಬೆಂಬಲಿಸಿದ್ದರೆ 1947ಕ್ಕಿಂತ ಮುಂಚೇನೆ ದೇಶಕ್ಕೆ ಸ್ವಾತಂತ್ರ್ಯ ಸಿಗುವ ಸಂಭವನೀಯತೆ ಹೆಚ್ಚಾಗಿತ್ತು. ಇವುಗಳನ್ನೆಲ್ಲಾ ಹಿಂದೆ ಆಡಳಿತ ನಡೆಸಿದ ಪಕ್ಷಗಳ ಸರ್ಕಾರಗಳು ಇತಿಹಾಸ ತಿರುಚಿ ಮರೆಮಾಚಿವೆ ಎಂದು ಅಭಿಪ್ರಾಯಪಟ್ಟರು.

ನಾಗರಿಕ ಹಿತರಕ್ಷಣಾ ಸಮಿತಿ ಅಧ್ಯಕ್ಷ ಪಿ. ಅಂಜಿನಪ್ಪ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಧ್ಯಾಪಕರಾದ ಬಿ. ಕೋಜಪ್ಪ, ತುಳಜಾನಾಯಕ, ಶಂಕರ್ ನಾಯ್ಕ, ಅಂಜನಮೂರ್ತಿ, ಸಮಿತಿಯ ಕಾರ್ಯದರ್ಶಿ ಪಿ.ಎಸ್. ನಾಗರಾಜ, ಸುರೇಶ ಹೆಡ್ಡಿಗೇರಿ ಮತ್ತು ಇತರರು ಭಾಗವಹಿಸಿದ್ದರು.

# ರಾಗಿ ಖರೀದಿಗೆ ಶೀಘ್ರ ಚಾಲನೆ : ಭೈರತಿ

ದಾವಣಗೆರೆ, ಜ. 28 - ಬೆಂಬಲ ಬೆಲೆಯಲ್ಲಿ ರಾಗಿ ಖರೀದಿಸುವ ಪ್ರಕ್ರಿಯೆಗೆ ಮತ್ತೆ ಚಾಲನೆ ನೀಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ ತಿಳಿಸಿದ್ದಾರೆ.

ನಿನ್ನೆ ಇಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ನಿನ್ನೆಯಷ್ಟೇ ಜಿಲ್ಲಾಧಿಕಾರಿಗಳ ಜೊತೆ ಮಾತನಾಡಿದ್ದೇನೆ. ರಾಜ್ಯದ ಸಚಿವರ ಜೊತೆ ಮಾತನಾಡಿದ್ದು, ಕೇಂದ್ರ ಕೃಷಿ ಸಚಿವೆ ಶೋಭಾ ಕರಂದ್ಲಾಜೆ ಅವರನ್ನೂ ಸಂಪರ್ಕಿಸುತ್ತೇನೆ. ಒಂದೆರಡು ದಿನಗಳಲ್ಲೇ ಖರೀದಿ ಪುನರಾರಂಭಕ್ಕೆ ಕ್ರಮ ವಹಿಸಲಾಗುವುದು ಎಂದರು.

ಸಂಸದ ಜಿ.ಎಂ.ಸಿದ್ದೇಶ್ವರ ಅವರು ಜಿಲ್ಲೆಗೆ ವಿಮಾನ ನಿಲ್ದಾಣ ನಿರ್ಮಿಸಿಕೊಡಬೇಕೆಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿರುವ ಹಿನ್ನೆಲೆಯಲ್ಲಿ ಕೇಂದ್ರ ವಿಮಾನಯಾನ ಸಚಿವರು ಡಿಪಿಆರ್ (ವಿಸ್ತೃತ ಯೋಜನಾ ವರದಿ) ತಯಾರಿಸಿ ಪ್ರಸ್ತಾವನೆ ಸಲ್ಲಿಸುವಂತೆ ಸೂಚನೆ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ದಾವಣಗೆರೆಯಲ್ಲಿ ವಿಮಾನ ನಿಲ್ದಾಣ ಆಗುವುದು ನಿಶ್ಚಿತ ಎಂದು ಸಚಿವರು ಮತ್ತೊಂದು ಪ್ರಶ್ನೆಗೆ ಉತ್ತರಿಸಿದ್ದಾರೆ.

ಕುಂದುವಾಡ ಬಳಿ ದೂಡಾದಿಂದ ಭೂ ಸ್ವಾಧೀನ ಪ್ರಕ್ರಿಯೆ ತ್ವರಿತವಾಗಿ ಪೂರ್ಣಗೊಳಿಸಿ ಸುಸಜ್ಜಿತ ಬಡಾವಣೆ ನಿರ್ಮಿಸಲಾಗುವುದು. ನಿವೇಶನಗಳಿಗೆ ಅರ್ಜಿ ಸಲ್ಲಿಸಿರುವ ಅರ್ಹ ಫಲಾನುಭವಿಗಳಿಗೆ ನಿವೇಶನ ನೀಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದವರು ಇದೇ ವೇಳೆ ತಿಳಿಸಿದ್ದಾರೆ.

ನಾನು ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವನಾಗಿ ಪ್ರಾಮಾಣಿಕ ಕೆಲಸ ಮಾಡುತ್ತಿದ್ದು, ಜಿಲ್ಲೆಯ ಜನರು ಅಪಾರ ಪ್ರೀತಿ, ವಿಶ್ವಾಸ ತೋರಿಸುತ್ತಿದ್ದಾರೆ. ಹೀಗಾಗಿ, ದಾವಣಗೆರೆ ಜಿಲ್ಲಾ ಉಸ್ತುವಾರಿ ಸ್ಥಾನ ನನಗೆ ಸಂತೃಪ್ತಿ ನೀಡಿದೆ. ಆದ್ದರಿಂದ ನನಗೆ ಬೇರೆ ಜಿಲ್ಲೆ ಬೇಡ. ಇದೇ ಜಿಲ್ಲೆ ಸಾಕು ಎಂದವರು ಹೇಳಿದರು.

ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಶ್ರಮಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದ್ದು, ಮುಂದಿನ ದಿನಗಳಲ್ಲಿ ಜಿಲ್ಲೆಗೆ ನೀರಾವರಿ ಯೋಜನೆ ಸೇರಿದಂತೆ ಇತರೆ ಯೋಜನೆಗಳನ್ನು ತಂದು ಅಭಿವೃದ್ಧಿಗೆ ಒತ್ತು ನೀಡಲಾಗುವುದು ಎಂದರು.

### ಶಾಸಕನಾಗದೆಯೂ ಸಚಿವರಾಗಬಹುದು : ಎಸ್ಎಆರ್



ಶಾಸಕ ಸ್ಥಾನಕ್ಕೆ ಮತ್ತೆ ಸ್ಪರ್ಧಿಸದೇ ಇದ್ದರೂ ಸಹ, ಸಚಿವ ಸ್ಥಾನ ಪಡೆಯಲು ಅವಕಾಶ ಇದೆ. ಹೀಗಾಗಿ ಮುಂದಿನ ಬಾರಿಯಾದರೂ ತಮಗೆ ಸಚಿವ ಸ್ಥಾನ ಸಿಗಬಹುದು ಎಂದು ಶಾಸಕ ಎಸ್.ಎ. ರವೀಂದ್ರನಾಥ್ ಆಶಯ ವ್ಯಕ್ತಪಡಿಸಿದ್ದಾರೆ.

ಸಚಿವ ಸ್ಥಾನಕ್ಕೆ ಸಂಬಂಧಿಸಿದಂತೆ ಪತ್ರಕರ್ತರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದ ಅವರು, ವಿಧಾನಸಭೆ, ಇಲ್ಲವೇ ಪರಿಷತ್ ಸದಸ್ಯರಾಗದ ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾಗಿದ್ದರು. ಹೀಗೆಯೇ ಶಾಸಕರಾಗದೇ ಹಲವರು ಸಚಿವರಾಗಿದ್ದಾರೆ ಎಂದರು.

ಮುಂದಿನ ಬಾರಿ ಶಾಸಕ ಸ್ಥಾನಕ್ಕೆ ಚುನಾವಣೆಗೆ ನಿಲ್ಲುವುದಿಲ್ಲ ಎಂದು ಈಗಾಗಲೇ ಹೇಳಿದ್ದೇನೆ. ಹಾಗೆಂದ ಮಾತ್ರಕ್ಕೆ ಮುಂದಿನ ಬಾರಿ ಸಚಿವನಾಗುವುದಿಲ್ಲ ಎಂದು ಹೇಳಲಾರೆ. ಅದಕ್ಕೆ ಬೇರೆ ಬೇರೆ ದಾರಿಗಳಿವೆ. ಪಕ್ಷದ ನಾಯಕನಾಗಿ ಕೆಲಸ ಮಾಡಿಯೂ ಸಚಿವರಾಗಬಹುದು ಎಂದವರು ಹೇಳಿದ್ದಾರೆ.

# ಯುವ ಪೀಳಿಗೆಗೆ ದೇಶದ ಕಾನೂನಿನ ಅರಿವು ಅಗತ್ಯ



**ರಾಣೇಬೆನ್ನೂರಿನ ಬಿಎಜೆಎಸ್‌ಎಸ್ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ 73ನೇ ಗಣರಾಜ್ಯೋತ್ಸವದಲ್ಲಿ ಮಾಜಿ ಸಚಿವ ರುದ್ರಪ್ಪ ಲಮಾಣಿ**

ರಾಣೇಬೆನ್ನೂರು,ಜ.28- ಇಂದಿನ ಯುವ ಪೀಳಿಗೆ ದೇಶದ ಕಾನೂನಿನ ಬಗ್ಗೆ ಅರಿವು ಹೊಂದಬೇಕು, ಸಂವಿಧಾನದ ಬಗ್ಗೆಯೂ ವಿದ್ಯಾರ್ಥಿಗಳು ಅರಿತು ಅದನ್ನು ಪರಿಪಾಲಿಸಬೇಕು ಎಂದು ಬಿಎಜೆಎಸ್‌ಎಸ್ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷರೂ ಹಾಗೂ ಮಾಜಿ ಸಚಿವ ರುದ್ರಪ್ಪ ಲಮಾಣಿ ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು.

ಸಂವಿಧಾನದ ಸಮಗ್ರತೆಯನ್ನು ಎತ್ತಿಹಿಡಿಯುವ ಮೂಲಕ ಈ ದಿನವನ್ನು ಗಣರಾಜೋತ್ಸವ ದಿನ ಎಂದು ಆಚರಿಸಲಾಗುತ್ತದೆ ಎಂದು ನಗರದ ಬಿಎಜೆಎಸ್‌ಎಸ್ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ 73ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಸ್ವಾತಂತ್ರ್ಯ ಹೋರಾಟಗಾರರಲ್ಲಿ ಅಂಜು ಬುರುಕುತನ ವಾಗಲಿ ಅಥವಾ ಹೇಡಿತನಗಳಿದ್ದಿದ್ದರೆ ಈ ದೇಶಕ್ಕೆ ಎಂದೂ ಸ್ವಾತಂತ್ರ್ಯ ದೊರೆಯುತ್ತಿರಲಿಲ್ಲ, ಅಂದು ಜಾಗೃತ ಹೋರಾಟಗಾರರು ಮಾಡಿದ ಹೋರಾಟದ ಫಲವಾಗಿ ಇಂದು ನಾವೆಲ್ಲರೂ ಶಾಂತಿ, ಸುವ್ಯವಸ್ಥೆಯಿಂದ ಬಾಳಲು ಸಾಧ್ಯವಾಗಿದೆ ಎಂದು ಬಿಎಜೆಎಸ್‌ಎಸ್ ಸಮೂಹ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಡಾ.ಆರ್.ಎಂ. ಕುಬೇರಪ್ಪ ನುಡಿದರು.

ಸ್ವಾತಂತ್ರ್ಯ ಹೇಗೆ ಸಿಕ್ಕಿತ್ತು ಎಂಬುದರ ಬಗ್ಗೆ ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕು. ಆಗ ದೇಶದ ಮೇಲೆ ನಂಬಿಕೆ, ಅಭಿಮಾನ ಬೆಳೆಯಲು ಸಾಧ್ಯವಾಗುತ್ತದೆ. ಅಲ್ಲದೇ ಇಂದು ಯುವ ಪೀಳಿಗೆ ನೈತಿಕ ಜಾಗೃತಿಗಾಗಿ ಹೋರಾಟ ಮಾಡಬೇಕಾಗಿದೆ ಎಂದು ಕುಬೇರಪ್ಪ ಕರೆ ನೀಡಿದರು.

ಅಧ್ಯಕ್ಷತೆಯನ್ನು ಪ್ರಾಚಾರ್ಯ ಸುರೇಶ್ ಬಣಕಾರ ವಹಿಸಿದ್ದರು. ಆಡಳಿತ ಮಂಡಳಿಯ ಸದಸ್ಯರಾದ ಗೋಪಾಲ ರೆಡ್ಡಿ, ಪ್ರಕಾಶ ಬಸಪ್ಪನವರ, ಎಂ.ಮೃತ್ಯುಂಜಯ. ಹೆಚ್.ಪಟ್ಟಣಶೆಟ್ಟಿ. ಕೆ.ಕೆ.ಹಾವಿನಾಳ ಮತ್ತಿತರರು ಭಾಗವಹಿಸಿದ್ದರು. ಸ್ವಾಗತ-ಡಾ.ಕಾಂತೇಶ ರೆಡ್ಡಿ, ನಿರೂಪಣೆ-ಸುನೀಲ್ ಹಿರೇಮಣಿ, ವಂದನಾರ್ಪಣೆ ಬಸವರಾಜ ಮಳೇನಹಳ್ಳಿ ಮಾಡಿದರು.

# ಜಿಲ್ಲೆಯಲ್ಲಿ 248 ಸೇವಾ ಸಿಂಧು ಕೇಂದ್ರಗಳು ಶೀಘ್ರ ಕಾರ್ಯಾರಂಭ



**ಕುಂಬಳೂರು ಸೇವಾ ಸಿಂಧು ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಜಯಂತ್ ಪೂಜಾರ್**

ಮಲೇಬೆನ್ನೂರು, ಜ. 28- ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ರಾಜ್ಯದಲ್ಲಿ 4 ಸಾವಿರ ಮತ್ತು ದಾವಣಗೆರೆ ಜಿಲ್ಲೆಯಲ್ಲಿ 248 ಸೇವಾ ಸಿಂಧು ಕೇಂದ್ರಗಳು ಹಂತ ಹಂತವಾಗಿ ಕಾರ್ಯಾರಂಭ ಮಾಡಲಿವೆ ಎಂದು ಯೋಜನೆಯ ಜಿಲ್ಲಾ ನಿರ್ದೇಶಕ ಜಯಂತ್ ಪೂಜಾರ್ ಹೇಳಿದರು.

ಕುಂಬಳೂರು ಗ್ರಾಮದ ಅನುಪಮ ಹೋಟೆಲ್‌ನ ಮೇಲ್ಭಾಗದ ಕೊಠಡಿಯಲ್ಲಿ ಹರಿಹರ ತಾಲ್ಲೂಕಿನ ಪ್ರಥಮ ಸೇವಾ ಸಿಂಧು ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಜನ ಸಾಮಾನ್ಯರಿಗೆ ಉಪಯುಕ್ತ ಸೇವೆಯನ್ನು ಅತ್ಯಂತ ಕಡಿಮೆ ಸೇವಾ ಶುಲ್ಕದಲ್ಲಿ ಒದಗಿಸುವ ಉದ್ದೇಶದಿಂದ ಡಾ. ವೀರೇಂದ್ರ ಹೆಗ್ಗಡೆ ಅವರು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಕಾರದೊಂದಿಗೆ ಸೇವಾ ಸಿಂಧು ಕೇಂದ್ರಗಳನ್ನು ಪ್ರಾರಂಭಿಸಿದ್ದಾರೆ. ಇದರಿಂದಾಗಿ 4 ಸಾವಿರ ನಿರುದ್ಯೋಗಿಗಳಿಗೆ ಉದ್ಯೋಗ ನೀಡಲಾಗಿದ್ದು, ಇ-ಶ್ರಮ ಕಾರ್ಡ್, ಆಧಾರ್ ತಿದ್ದುಪಡಿ ಸೇರಿದಂತೆ ತಾ.ಪಂ., ಕಂದಾಯ ಮತ್ತು ಕೃಷಿ ಇಲಾಖೆಗೆ ಸೌಲಭ್ಯ ಕೋರಿ ನೀವು ಅರ್ಜಿಗಳನ್ನು ನಮ್ಮ ಸೇವಾ ಸಿಂಧು ಕೇಂದ್ರದಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಬಹುದು.

ಹರಿಹರ ಯೋಜನಾ ವ್ಯಾಪ್ತಿಯಲ್ಲಿ 38 ಮತ್ತು ಮಲೇಬೆನ್ನೂರು ಯೋಜನಾ ವ್ಯಾಪ್ತಿಯಲ್ಲಿ 28 ಸೇವಾ ಸಿಂಧು ಕೇಂದ್ರಗಳು ಇಂದಿನಿಂದ ಕಾರ್ಯನಿರ್ವಹಿಸಲಿವೆ ಎಂದು ಜಯಂತ್ ಪೂಜಾರ್ ತಿಳಿಸಿದರು.

ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ ಮಾತನಾಡಿ, ನಮ್ಮ ಯೋಜನಾ ವ್ಯಾಪ್ತಿಯಲ್ಲಿ ಇದು ಪ್ರಥಮ ಸೇವಾ ಸಿಂಧು ಕೇಂದ್ರವಾಗಿದ್ದು, ಈ ದಿನ ಜಿಗಳಿ, ಯಲವಟ್ಟಿ ಮತ್ತಿತರೆ ಗ್ರಾಮಗಳಲ್ಲೂ ಈ ಕೇಂದ್ರಗಳು ಪ್ರಾರಂಭವಾಗಲಿವೆ ಎಂದರು.

ಕುಂಬಳೂರು ಗ್ರಾ.ಪಂ. ಅಧ್ಯಕ್ಷರಾದ ಶ್ರೀಮತಿ ಲೀಲಾ ಶಿವಕುಮಾರ್ ಅವರು ಸೇವಾ ಸಿಂಧು ಕೇಂದ್ರಗಳ ತಾಲ್ಲೂಕು ಮಟ್ಟದ ಅಧಿಕಾರಿ ಮಂಜುನಾಥ್, ಜ್ಞಾನ ವಿಕಾಸ ಮೇಲ್ವಿಚಾರಕಿ ರಕ್ಷಿತಾ, ತಾಲ್ಲೂಕು ಅಂತರಿಕ ಲೆಕ್ಕ ಪರಿಶೋಧಕ ಚಿದಂಬರ್, ಸಹಾಯಕ ವ್ಯವಸ್ಥಾಪಕ ರಾಕೇಶ್, ವಲಯ ಮೇಲ್ವಿಚಾರಕಿ ಪದ್ಮಾವತಿ, ಸೇವಾ ಪ್ರತಿನಿಧಿ ರೇಖಾ, ಸೇವಾ ಸಿಂಧು ಕೇಂದ್ರದ ಅನುಪಮ ಹೋಟೆಲ್ ಮಾಲೀಕ ಶ್ರೀನಿವಾಸ್, ಕಾವ್ಯ ಮತ್ತಿತರರು ಈ ವೇಳೆ ಹಾಜರಿದ್ದರು.

## ರೋಟರಿಯಿಂದ ಕಂಪ್ಯೂಟರ್ ವಿತರಣೆ

ದಾವಣಗೆರೆ, ಜ.28- ತಾಂತ್ರಿಕ ಶಿಕ್ಷಣ ಇಲಾಖೆ, ಇನ್ಫೋಸಿಸ್ ಮತ್ತು ವಿದ್ಯಾನಗರ ರೋಟರಿ ಕ್ಲಬ್ ಇವರುಗಳ ಸಂಯುಕ್ತಾಶ್ರಯದಲ್ಲಿ ಇಲ್ಲಿನ ಡಿ.ಆರ್. ಆರ್. ಪಾಲಿಟೆಕ್ನಿಕ್‌ನ 97 ವಿದ್ಯಾರ್ಥಿಗಳಿಗೆ ಉಚಿತವಾಗಿ ಕಂಪ್ಯೂಟರ್ ಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಸದಾನಂದಪ್ಪ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ರೋಟರಿ ಜಿಲ್ಲಾ ಕಾರ್ಯದರ್ಶಿ ನಾಗರಾಜ ಜಾಧವ್, 2020-21ನೇ ಸಾಲಿನ ರೋಟರಿ ಉಪ ರಾಜ್ಯಪಾಲ ಹೆಚ್.ಎಂ.ಚಂದ್ರಚಾರ್, 2022-23ನೇ ಸಾಲಿನ ಉಪರಾಜ್ಯಪಾಲ ಎನ್.ಬಿ. ಮೃತ್ಯುಂಜಯಪ್ಪ, ವಿದ್ಯಾನಗರ ಇನ್ನರ್ ವ್ಹೀಲ್ ಕ್ಲಬ್ ಅಧ್ಯಕ್ಷರಾದ ಗಿರಿಜಾ ಬಿಲ್ಲಳ್ಳಿ ಆಗಮಿಸಿದ್ದರು.

ರೋಟರಿ ಜಿಲ್ಲಾ ಕಾರ್ಯದರ್ಶಿ ನಾಗರಾಜ ಜಾಧವ್ ಅವರು ಮಾತನಾಡಿ, ಈ ಕಂಪ್ಯೂಟರ್‌ಗಳನ್ನು ಇನ್ಫೋಸಿಸ್‌ನಿಂದ ಖರೀದಿಸಿ ಕರ್ನಾಟಕದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್‌ಗಳಿಗೆ ಸರಬರಾಜು ಮಾಡಲಾಗಿದೆ. ಅದರಲ್ಲಿ 547 ಕಂಪ್ಯೂಟರ್ ಗಳನ್ನು ದಾವಣಗೆರೆ ಜಿಲ್ಲೆಗೆ ಒದಗಿಸಲಾಗಿದೆ. ಪ್ರತಿ ಕಂಪ್ಯೂಟರ್ ಗೆ 200 ರೂ. ಅಳವಡಿಕೆ ವೆಚ್ಚ ಸೇರಿದಂತೆ 19,400 ರೂ. ಗಳಾಗುತ್ತದೆ, ವಿದ್ಯಾನಗರ ರೋಟರಿ ಸಂಸ್ಥೆಯಿಂದ ದೇಣಿಗೆ ಪಡೆದು 97 ಕಂಪ್ಯೂಟರ್ ವಿತರಿಸುತ್ತಿರುವುದಾಗಿ ಜಾಧವ್ ತಿಳಿಸಿದರು.

## ಹರಿಹರದಲ್ಲಿ ಸಾಮೂಹಿಕ ವಿವಾಹ



ಹರಿಹರ, ಜ.28- ನಗರದ ಕದಂಬ ರಕ್ಷಣಾ ವೇದಿಕೆ ವತಿಯಿಂದ ಶ್ರೀ ಹರಿಹರೇಶ್ವರ ದೇವಸ್ಥಾನ ಪಕ್ಕದಲ್ಲಿ ಇರುವ ಬಿರ್ಲಾ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ಉಚಿತ ಸಾಮೂಹಿಕ ಮದುವೆ ಸಮಾರಂಭಕ್ಕೆ ನಟ ಪ್ರೇಮ್, ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್ ಚಾಲನೆ ನೀಡಿದರು.

ಸಾಮೂಹಿಕ ವಿವಾಹದಲ್ಲಿ ಹತ್ತು ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಈ ವೇಳೆ ದಾವಣಗೆರೆಯ ವಿರಕ್ತ ಮಠದ ಶ್ರೀ ಬಸವ ಪ್ರಭು ಸ್ವಾಮೀಜಿ, ನೇಕಾರ ಗುರುಪೀಠದ ಶ್ರೀ ಪ್ರಭುಲಿಂಗ ಸ್ವಾಮೀಜಿ, ನಗರಸಭೆ ಅಧ್ಯಕ್ಷರಾದ ರತ್ನ ಡಿ. ಉಜ್ಜೇಶ್, ಜಿ.ಪಂ. ಮಾಜಿ ಸದಸ್ಯ ಎಂ.ನಾಗೇಂದ್ರಪ್ಪ, ನಗರಸಭೆ ಪೌರಾಯುಕ್ತರಾದ ಎಸ್.ಲಕ್ಷ್ಮೀ, ಸಮಾಜ ಸೇವಕ ನಂದಿಗಾವಿ ಶ್ರೀನಿವಾಸ್, ಕಾರ್ಮಿಕ ಮುಖಂಡ ಹೆಚ್.ಕೆ.ಕೊಟ್ರಪ್ಪ, ಕದಂಬ ರಕ್ಷಣಾ ವೇದಿಕೆ ಅಧ್ಯಕ್ಷ ಹೆಚ್.ಸುಧಾಕರ್ ಸೇರಿದಂತೆ ಇತರರು ಹಾಜರಿದ್ದರು.

## ನಾಳೆ ಶರಣ ಸಾಹಿತ್ಯ ಪರಿಷತ್ತಿನ ಸಭೆ

ದಾವಣಗೆರೆ, ಜ.28 - ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತ್ ದಾವಣಗೆರೆ ಜಿಲ್ಲಾ ಕಾರ್ಯಕಾರಿ ಸಮಿತಿಯ ಸಭೆಯನ್ನು ನಾಡಿದ್ದು ದಿನಾಂಕ 30 ರ ಭಾನುವಾರ ಬೆಳಿಗ್ಗೆ 11ಕ್ಕೆ ಎಂಸಿಸಿ 'ಬಿ' ಬ್ಲಾಕ್ ವೆಂಕಟೇಶ್ವರ ದೇವಸ್ಥಾನ ಪಕ್ಕದ ಭಾರತ ಸೇವಾದಳ ಭವನದಲ್ಲಿ ಕರೆಯಲಾಗಿದೆ ಎಂದು ಪರಿಷತ್ ಜಿಲ್ಲಾಧ್ಯಕ್ಷ ಕೆ. ಬಿ. ಪರಮೇಶ್ವರಪ್ಪ ತಿಳಿಸಿದ್ದಾರೆ.

## ಪ್ರೊ. ಕೃಷ್ಣಪ್ಪ ಭವನದಲ್ಲಿ ಇಂದು - ನಾಳೆ ಮಾನವ ಬಂಧುತ್ವ ವಿಭಾಗೀಯ ಸಭೆ

ಹರಿಹರ ಸಮೀಪದ ಬೈಪಾಸ್ ಬಳಿ ಇರುವ ಪ್ರೊ. ಬಿ.ಕೃಷ್ಣಪ್ಪ ಸಾಂಸ್ಕೃತಿಕ ಭವನದಲ್ಲಿ ಇಂದು ಮತ್ತು ನಾಳೆ ಮಾನವ ಬಂಧುತ್ವ ವೇದಿಕೆಯ ವಿಭಾಗೀಯ ಸಂಘಟನಾ ಸಮಾವೇಶ ನಡೆಯಲಿದೆ.

ಇಂದು ಬೆಳಿಗ್ಗೆ 10.30ಕ್ಕೆ ನಿಜ ಶರಣ ಅಂಬಿಗರ ಚೌಡಯ್ಯ ಗುರುಪೀಠದ ಶ್ರೀ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ ಅವರು ಸಮಾವೇಶ ಉದ್ಘಾಟಿಸಲಿದ್ದು, ಸತೀಶ್ ಜಾರಕಿಹೊಳಿ ಅಧ್ಯಕ್ಷತೆ ವಹಿಸುವರು. ಶಾಸಕ ರಾಮಪ್ಪ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 12 ಗಂಟೆಗೆ 'ಭಾರತದ ಸಾಮಾಜಿಕ - ಸಾಂಸ್ಕೃತಿಕ ತಲ್ಲಣಗಳು' ಕುರಿತಾದ 1ನೇ ಗೋಷ್ಠಿಯಲ್ಲಿ ಡಾ. ಸಿದ್ದನಗೌಡ ಪಾಟೀಲ್ ವಿಷಯ ಮಂಡಿಸಲಿದ್ದು, ಇರ್ಫಾನ್ ಮುದಗಲ್ ಅಧ್ಯಕ್ಷತೆ ವಹಿಸುವರು.

ಮಧ್ಯಾಹ್ನ 2 ಗಂಟೆಗೆ 'ಪ್ರಸಕ್ತ ರಾಜಕೀಯ - ಆರ್ಥಿಕ ಬಿಕ್ಕಟ್ಟು ಮತ್ತು ಸಂವಿಧಾನಿಕ ಸವಾಲುಗಳು' ಕುರಿತಾದ 2ನೇ ಗೋಷ್ಠಿಯಲ್ಲಿ ರಾಜ್ಯಸಭಾ ಸದಸ್ಯ ಡಾ. ಎಲ್.ಹನುಮಂತಯ್ಯ ವಿಷಯ ಮಂಡಿಸಲಿದ್ದು, ಪ್ರಕಾಶ್ ಹಾದಿಮನಿ ಅಧ್ಯಕ್ಷತೆ ವಹಿಸುವರು.

ನಾಳೆ ಭಾನುವಾರ ಬೆಳಿಗ್ಗೆ 10 ಗಂಟೆಗೆ ಬಂಧುತ್ವ ಚಳುವಳಿ ಮತ್ತು ಇಂದಿನ ಅಗತ್ಯ ಹಾಗೂ 12 ಗಂಟೆಗೆ ಮಾನವ ಬಂಧುತ್ವ ಸಂಘಟನೆ ಮತ್ತು ಭವಿಷ್ಯದ ಕಾರ್ಯಕ್ರಮಗಳ ಕುರಿತು ಗೋಷ್ಠಿಗಳು ನಡೆಯಲಿವೆ. ಮಧ್ಯಾಹ್ನ 3 ಗಂಟೆಗೆ ಸಮಾರೋಪ ಸಮಾರಂಭದಲ್ಲಿ ಸತೀಶ್ ಜಾರಕಿಹೊಳಿ ಭಾಗವಹಿಸುವರು.

## ಹರಪನಹಳ್ಳಿ ಆದರ್ಶ ವಿದ್ಯಾಲಯಕ್ಕೆ ಪ್ರವೇಶ

ಹರಪನಹಳ್ಳಿ, ಜ.28- ತಾಲ್ಲೂಕಿನ ಅನಂತನಹಳ್ಳಿ ಬಳಿ ಇರುವ ಆದರ್ಶ ವಿದ್ಯಾಲಯ (ಆರ್‌ಎಂಎಸ್‌ಎ)ದ 6ನೇ ತರಗತಿ ಪ್ರವೇಶ ಪರೀಕ್ಷೆಗಾಗಿ ಅರ್ಹ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇಂದಿನಿಂದ ಬರುವ ಫೆಬ್ರವರಿ 9ರ ವರೆಗೆ ವೆಬ್‌ಸೈಟ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ವಿವರಕ್ಕೆ ಪ್ರಭಾರಿ ಮುಖ್ಯ ಶಿಕ್ಷಕಿ ಪರ್ವಿನ್ ಬಾನು (9980040561), ಇಸಿಓ ಮಂಜುನಾಥ ಗಿರಜ್ಜಿ (7975534725), ಎಫ್‌ಡಿಎ ದರ್ಶನ್ (9611961461) ರವರನ್ನು ಸಂಪರ್ಕಿಸಲು ಕ್ಷೇತ್ರ ಶಿಕ್ಷಣಾಧಿಕಾರಿ ಯು.ಬಸವರಾಜ್ ಕೋರಿದ್ದಾರೆ.

# ದೇಶದ ಐಕ್ಯತೆ, ಸಮಗ್ರತೆಗೆ ಒಟ್ಟಾಗಿ ಶ್ರಮಿಸಬೇಕು

**ಕುಂದೂರು ಗ್ರಾ.ಪಂ. ಗಣರಾಜ್ಯೋತ್ಸವದಲ್ಲಿ ಕುಂದೂರು ಗ್ರಾ.ಪಂ. ಅಧ್ಯಕ್ಷ ಚಿದಾನಂದಮೂರ್ತಿ**



ಹೊನ್ನಾಳಿ, ಜ. 28- ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಎಲ್ಲರೂ ಶ್ರಮಿಸಬೇಕು ಎಂದು ತಾಲ್ಲೂಕಿನ ಕುಂದೂರು ಗ್ರಾ.ಪಂ. ಅಧ್ಯಕ್ಷ ಚಿದಾನಂದಮೂರ್ತಿ ಹೇಳಿದರು.

ತಾಲ್ಲೂಕಿನ ಕುಂದೂರು ಗ್ರಾ.ಪಂ. ಕಛೇರಿ ಆವರಣದಲ್ಲಿ ಹಮ್ಮಿಕೊಂಡಿದ್ದ ಗಣರಾಜ್ಯೋತ್ಸವ ಸಮಾರಂಭದಲ್ಲಿ ಮಹಾತ್ಮಗಾಂಧಿ, ಡಾ. ಬಿ.ಆರ್. ಅಂಬೇಡ್ಕರ್ ಭಾವಚಿತ್ರಗಳಿಗೆ ಪೂಜೆ ಸಲ್ಲಿಸಿ, ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಸ್ವಾತಂತ್ರ್ಯೋತ್ತರ ಭಾರತ ದೇಶ ಹಲವಾರು ಕ್ಷೇತ್ರಗಳಲ್ಲಿ ಮಹತ್ತರ ಸಾಧನೆ ಮಾಡಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡುವ ಮೂಲಕ ಬಲಿಷ್ಠ ರಾಷ್ಟ್ರ ನಿರ್ಮಾಣಕ್ಕೆ ನಾವೆಲ್ಲರೂ ವೈಯಕ್ತಿಕ ಕಾಣಿಕೆ ನೀಡೋಣ ಎಂದು ತಿಳಿಸಿದರು.

ಮುಖಂಡರಾದ ಎಂ.ಪಿ. ಮಲ್ಲಿಕಾರ್ಜುನ ಸ್ವಾಮಿ, ಗ್ರಾ.ಪಂ. ಉಪಾಧ್ಯಕ್ಷೆ ರೇಖಾ ಎನ್.ಜಿ. ರೇವಣಸಿದ್ದಪ್ಪ, ಸದಸ್ಯರಾದ ಎಸ್.ಆರ್. ಪ್ರಸನ್ನ ಕುಮಾರ್, ಎಸ್. ಧನಂಜಯ, ರಹಮತ್ ಉಲ್ಲಾ ಖಾನ್, ಸಿ. ಆಂಜನೇಯ, ಉದಯ್‌ಕುಮಾರ್, ಲತಾ ಹಾಲೇಶ್ ಮುಡೋಳ್, ಮಂಜುಳಾ, ರತ್ನಮ್ಮ ಕರಿಬಸಪ್ಪ, ನೇತ್ರಾವತಿ, ಕವಿತಾ, ನುಸ್ರುತ್ ಜಬೀನಾ, ರೇಣುಕಮ್ಮ, ಸುರೇಶ್, ಕಾರ್ಯದರ್ಶಿ ವೀರೇಂದ್ರ, ಕಂಪ್ಯೂಟರ್ ಆಪರೇಟರ್ ಸುಮಲತಾ ಉಪಸ್ಥಿತರಿದ್ದರು.

## ಎಸ್.ಇಂಡಿಯಾ ಪಬ್ಲಿಕ್ ಶಾಲೆಯಲ್ಲಿ ಪ್ರಜಾ ರಾಜ್ಯೋತ್ಸವ

ಮಲೇಬೆನ್ನೂರು, ಜ. 28- ಪಟ್ಟಣದ ಜಿಗಳಿ ರಸ್ತೆಯಲ್ಲಿರುವ ಎಸ್ ಇಂಡಿಯಾ ಪಬ್ಲಿಕ್ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಪ್ರಜಾ ರಾಜ್ಯೋತ್ಸವ ಕಾರ್ಯಕ್ರಮದ ಧ್ವಜಾರೋಹಣವನ್ನು ವಿದ್ಯಾಸಂಸ್ಥೆಯ ಪ್ರಾಚಾರ್ಯ ಜನಾಬ್ ಮುನ್ಸರ್ ಹಮೀದ್ ನೆರವೇರಿಸಿದರು. ಶಿಕ್ಷಕರಾದ ಸಲ್ಮಾನುಲ್ ಫಾರಿಸ್ ಬುಖಾರಿ, ಎಸ್.ಟಿ. ಮಮತ, ಸಲ್ಮಾಬಾನು, ಸಯದಾ ಖುರ್ರತ್ ಉಲ್ಲೈನ್, ಸಬ್ರೀನ್ ತಾಜ್ ಉಪಸ್ಥಿತರಿದ್ದರು.


**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**
ದಾವಣಗೆರೆ ವಿಭಾಗ, ದಾವಣಗೆರೆ.

ಸಂಖ್ಯೆ: ಕರಾಸಾ/ದಾವಿ/ಸಂಚಾರ/ವಾಣಿಜ್ಯ/1744/2021-22 ದಿನಾಂಕ: 28-01-2022

**ಸಂಧಾನ ಪ್ರಕಟಣೆ ಸಂಖ್ಯೆ: 08/2021-22**
(ಬಸ್ ನಿಲ್ದಾಣಗಳ ಹೊರ ಆವರಣದ ಜಾಹೀರಾತುಗಳಿಗೆ ಪ್ಯಾಕೇಜ್ ಮಾದರಿಯಲ್ಲಿ)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಯಲ್ಲಿ ಇರುವ **ಹರಿಹರ** ಬಸ್ ನಿಲ್ದಾಣದ, ಹೊರಭಾಗದಲ್ಲಿ ಯೂನಿಪೋಲ್ಸ್, ಹೋರ್ಡಿಂಗ್ಸ್ ಮತ್ತು ಆರ್ಚ್‌ಗಳು ಖಾಲಿ ಇದ್ದು ಹಾಗೂ **ಜಗಳೂರು** ಬಸ್ ನಿಲ್ದಾಣದಲ್ಲಿ ಹೋರ್ಡಿಂಗ್ಸ್‌ಗಳು ಖಾಲಿ ಇದ್ದು, ಸದರಿ ಬಸ್ ನಿಲ್ದಾಣದ ಹೊರ ಭಾಗದ ಸ್ಥಳಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು **ಸಂಧಾನದ ಮೂಲಕ** ಪ್ರಕಟಣೆ ಹೊರಡಿಸಲಾಗಿರುತ್ತದೆ.

ಸದರಿ ಮಾಹಿತಿಯನ್ನು ನಿಗಮದ ವೆಬ್‌ಸೈಟ್: **ksrtc.karnataka.gov.in** ನಲ್ಲಿ ದಿನಾಂಕ: **28-01-2022** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ **ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ – 577002** ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: **ವಿಭಾಗೀಯ ಸಂಚಾರ ಅಧಿಕಾರಿ – 7760990452, ಸಹಾಯಕ ಸಂಚಾರ ವ್ಯವಸ್ಥಾಪಕರು – 7760990461**.

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ.

ವಾಸಾಸಂಇ/ಬೆಂ.ನ/ಅಡ್ವರ್ಟೋರ್/3092/2021-22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**
ದಾವಣಗೆರೆ ವಿಭಾಗ, ದಾವಣಗೆರೆ.

ಸಂಖ್ಯೆ: ಕರಾಸಾ/ದಾವಿ/ಸಂಚಾರ/ವಾಣಿಜ್ಯ/1743/2021-22 ದಿನಾಂಕ: 28-01-2022

**ಮ್ಯಾನ್ಯುಯಲ್ ಟೆಂಡರ್/ಸಂಧಾನ ಪ್ರಕಟಣೆ ಸಂಖ್ಯೆ: 07/2021-22**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಗೆ ಬರುವ **ಮಲೆಬೆನ್ನೂರು** ಬಸ್ ನಿಲ್ದಾಣದ ಬೇಕರಿ ಮಳಿಗೆ ಸಂಖ್ಯೆ.02 (ತೆರೆದ ಸ್ಥಳ 03 ವರ್ಷ) ಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು **ಮ್ಯಾನ್ಯುಯಲ್ ಟೆಂಡರ್** ಮೂಲಕ ಆಹ್ವಾನಿಸಲಾಗಿದೆ. **ಹರಿಹರ** ಬಸ್ ನಿಲ್ದಾಣದ ದ್ವಿ-ಚಕ್ರ ವಾಹನ ನಿಲ್ದಾಣ (ತೆರೆದ ಸ್ಥಳ 03 ವರ್ಷ) ಕ್ಕೆ **ಸಂಧಾನದ ಮೂಲಕ (ಮಾತುಕತೆ ಮೂಲಕ)** ಆಹ್ವಾನಿಸಲಾಗಿದೆ.

ಸದರಿ ಮಾಹಿತಿಯನ್ನು ನಿಗಮದ ವೆಬ್‌ಸೈಟ್: **ksrtc.karnataka.gov.in** ನಲ್ಲಿ ದಿನಾಂಕ: **28-01-2022** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ **ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ – 577002** ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: **ವಿಭಾಗೀಯ ಸಂಚಾರ ಅಧಿಕಾರಿ – 7760990452, ಸಹಾಯಕ ಸಂಚಾರ ವ್ಯವಸ್ಥಾಪಕರು – 7760990461**.

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ.

ವಾಸಾಸಂಇ/ಬೆಂ.ನ/ಅಡ್ವರ್ಟೋರ್/3101/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



**VIN-US MULTIVENTURES PVT LTD**
**GLOBAL MINDS FOUNDATION**

**REQUIRED FACULTY FOR EEE BRANCH, E & C BRANCH**

Qulification : Diploma, B.E., M.tech

**WALK IN INTERVIEW**

On 30.01.2022 at 11.00 am to 2.00 pm and 31.01.2022 at 11.00 am to 2.00 pm

**VIN-US MULTIVENTURES PVT LTD.**
# 544, S Nijalingappa Layout, 2nd main, 11th cross,
Amritha Vidyalayam School Road, Davangere-4.

Teaching Experience : 0-5 years

Contact : 99646 36431, 90367 15174



**ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ**
ಶ್ರೀ ಡಿ.ದೇವರಾಜ ಅರಸು ಬಡಾವಣೆ, 'ಎ' ಬ್ಲಾಕ್,
ಪಿ.ಬಿ.ರಸ್ತೆ, ದಾವಣಗೆರೆ–06

ನಂ:ದಾಹನಪ್ರಾ:ಯೋವಿ:ಭೂಬ:2021–22:3061 ದಿ:27.01.2022

**ಪ್ರಕಟಣೆ**

**ಶ್ರೀ ಮಂಜುನಾಥ ಬಿನ್ ಗಂಗಾಧರಯ್ಯ ಮತ್ತು ಇತರರು, ದಾವಣಗೆರೆ.,** ಇವರು ತಮ್ಮ ಹಕ್ಕು ಸ್ವಾಧೀನದಲ್ಲಿರುವ **ದಾವಣಗೆರೆ** ತಾಲ್ಲೂಕು **ಶ್ಯಾಬನೂರು** ಗ್ರಾಮದ **ರಿಸನಂ.215/1ಬಿ** ರ **ವಿಸ್ತೀರ್ಣ: 0ಎ–16ಗುಂ ಮತ್ತು ರಿಸನಂ.215/6** ರ **ವಿಸ್ತೀರ್ಣ:0ಎ–04ಗುಂ** ರ ಜಮೀನನ್ನು **ಉದ್ಯಾನವನ/ ಬಯಲುಜಾಗೆ ಹಾಗೂ ಸಾರ್ವಜನಿಕ/ಅರೆಸಾರ್ವಜನಿಕ** ಉದ್ದೇಶದಿಂದ **ವಸತಿ** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಕೋರಿರುತ್ತಾರೆ. ಸರ್ಕಾರದಿಂದ ಅಂತಿಮ ಅನುಮೋದನೆಯಾಗಿರುವ ದಾವಣಗೆರೆ–ಹರಿಹರ ಸ್ಥಳೀಯ ಯೋಜನಾ ಮಹಾಯೋಜನೆ(ಪ–1)ರ ನಕ್ಷೆಯಲ್ಲಿ ಪ್ರಶ್ನಿತ ಜಮೀನು **ರಿಸನಂ.215/6** ರ ಪ್ರದೇಶವನ್ನು **ಉದ್ಯಾನವನ/ಬಯಲುಜಾಗೆ** ಉದ್ದೇಶಕ್ಕೆ ಕಾದಿರಿಸಲಾಗಿದೆ ಹಾಗೂ **ರಿಸನಂ.215/1ಬಿ ಪೈಕಿ ಉತ್ತರ ಭಾಗದ ವಿಸ್ತೀರ್ಣ:0ಎ–22ಗುಂ ಪ್ರದೇಶವನ್ನು ಉದ್ಯಾನವನ/ಬಯಲುಜಾಗೆ** ಉದ್ದೇಶಕ್ಕೆ ಕಾದಿರಿಸಲಾಗಿದೆ ಮತ್ತು **ದಕ್ಷಿಣ ಭಾಗದ ವಿಸ್ತೀರ್ಣ: 0ಎ–34ಗುಂ ಪ್ರದೇಶವನ್ನು ಸಾರ್ವಜನಿಕ/ಅರೆಸಾರ್ವಜನಿಕ** ಉದ್ದೇಶಕ್ಕೆ ಕಾದಿರಿಸಲಾಗಿದೆ. ಪ್ರಶ್ನಿತ ಜಮೀನಿನ ಅಕ್ಕಪಕ್ಕದಲ್ಲಿ ಈಗಾಗಲೇ ವಸತಿ ಬಡಾವಣೆಗಳು ಅಭಿವೃದ್ಧಿ ಹೊಂದಿರುವುದರಿಂದ ವಸತಿ ಬಡಾವಣೆ ನಿರ್ಮಾಣಕ್ಕೆ ಯೋಗ್ಯವಾದ ಪ್ರದೇಶವಾಗಿರುವುದರಿಂದ ವಸತಿ ಬಡಾವಣೆ ನಿರ್ಮಿಸಿ ಸಾರ್ವಜನಿಕರಿಗೆ ಯೋಗ್ಯ ದರದಲ್ಲಿ ನಿವೇಶನ ಮಾರಾಟ ಮಾಡುವುದರಿಂದ ಸರ್ಕಾರಕ್ಕೆ ಆದಾಯ ಹೆಚ್ಚಾಗುತ್ತದೆ ಎಂದು ಸಾರ್ವಜನಿಕ ಹಿತಾಸಕ್ತಿ ಬಗ್ಗೆ ತಿಳಿಸಿರುತ್ತಾರೆ. ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಸೆಕ್ಷನ್ 69(3) ರ ಪ್ರಕಾರ ಸದರಿ ಭೂ ಉಪಯೋಗ ಬದಲಾವಣೆ ಬಗ್ಗೆ ಸಲಹೆ/ಆಕ್ಷೇಪಣೆಗಳಿದ್ದರೇ, ಈ ಪ್ರಕಟಣೆಯ ದಿನಾಂಕದಿಂದ 15 ದಿನದೊಳಗಾಗಿ ಆಕ್ಷೇಪಣೆಗಳನ್ನು ಲಿಖಿತ ಮೂಲಕ ಪ್ರಾಧಿಕಾರಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. 15 ದಿವಸಗಳ ನಂತರ ಸಲ್ಲಿಸಲಾಗುವ ಆಕ್ಷೇಪಣೆಗಳಿಗೆ ಮಾನ್ಯತೆ ನೀಡಲಾಗುವುದಿಲ್ಲ ತಿಳಿಯಿರಿ.

ವಾಸಾಇ/ದಾವಣಗೆರೆ/670/ಎಂಸಿಎ/2021–22

ಸಹಿ/– **ಆಯುಕ್ತರು, ದಾ–ಹ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.**

# ವಾಸವಿರದ ಮತದಾರರ ಹೆಸರನ್ನು ಪಟ್ಟಿಯಿಂದ ತೆಗೆದು ಹಾಕಲು ಒತ್ತಾಯ



ದಾವಣಗೆರೆ, ಜ. 28- ಪಾಲಿಕೆಯ 16ನೇ ವಾರ್ಡ್‌ನ ವಿನೋಬನಗರದಲ್ಲಿ ವಾಸವಿಲ್ಲದ ಜನರ ಹೆಸರನ್ನು ಮತದಾರರ ಪಟ್ಟಿಯಿಂದ ಕೈ ಬಿಡುವಂತೆ ಬಿಜೆಪಿ ಕಾನೂನು ಪ್ರಕೋಷ್ಠದ ಜಿಲ್ಲಾ ಘಟಕದಿಂದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಉಪ ವಿಭಾಗಾಧಿಕಾರಿ ಮಮತಾ ಹೊಸಗೌಡರ್, ಪಾಲಿಕೆ ಆಯುಕ್ತ ವಿಶ್ವನಾಥ ಪಿ. ಮುದಜ್ಜಿ ಅವರುಗಳಿಗೆ ಮನವಿ ಸಲ್ಲಿಸಲಾಯಿತು.

ಡಿಸಿ ಕಛೇರಿಯಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರಿಗೆ ಮನವಿ ಸಲ್ಲಿಸಿದ ಬಿಜೆಪಿ ಕಾನೂನು ಪ್ರಕೋಷ್ಠದ ಪದಾಧಿಕಾರಿಗಳು, ವಕೀಲರು, ವಿನೋಬನಗರ ವಾರ್ಡ್‌ನಲ್ಲಿ ವಾಸಿಸದ ಜನರ ಹೆಸರು ಅಲ್ಲಿನ ಮತದಾರರ ಪಟ್ಟಿಯಲ್ಲಿದ್ದು, ಅಂತಹ ಹೆಸರುಗಳನ್ನು ಪಟ್ಟಿಯಿಂದ ಕೈ ಬಿಡುವಂತೆ ಒತ್ತಾಯಿಸಿದರು.

ಇದೇ ವೇಳೆ ಮಾತನಾಡಿದ ಪ್ರಕೋಷ್ಠದ ಜಿಲ್ಲಾ ಸಂಚಾಲಕ - ವಕೀಲರ ಸಂಘದ ನಿಕಟಪೂರ್ವ ಉಪಾಧ್ಯಕ್ಷ ಹೆಚ್. ದಿವಾಕರ್, ಪ್ರಕೋಷ್ಠದ ರಾಜ್ಯ ಸಮಿತಿ ಸದಸ್ಯ- ಯುವ ವಕೀಲ ಎ.ಸಿ. ರಾಘವೇಂದ್ರ ಮೊಹರೆ ಸ್ಥಳೀಯವಾಗಿ ವಾಸಿಸದೇ, ನಕಲಿ ಡೋರ್ ನಂಬರ್‌ಗಳನ್ನು ನೀಡಿ, ವಿನೋಬನಗರದ ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸುವವರ ವಿರುದ್ಧ ಚುನಾವಣಾ ಆಯೋಗದ ನಿಯಮಾನುಸಾರ ಜಿಲ್ಲಾಡಳಿತ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಈಗಾಗಲೇ ಪಟ್ಟಿಯಿಂದ ಹೆಸರುಗಳನ್ನು ಕೈ ಬಿಟ್ಟಿದ್ದರೂ, ನಕಲಿ ಡೋರ್ ನಂಬರ್ ನೀಡಿ, ಸ್ಥಳೀಯವಾಗಿ ವಾಸಿಸದ ಸಾವಿರಾರು ಜನರು ವಿನೋಬನಗರ ಮತದಾರರೆಂದು ಪಟ್ಟಿಯಲ್ಲಿದ್ದಾರೆ ಎಂದು ಅವರು ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

ಪ್ರಕೋಷ್ಠದ ಮನೋಹರ್ ಮಹೇಂದ್ರಕರ್ ಶಿವಕುಮಾರ್, ಎಸ್. ಮಂಜು ಉಪಸ್ಥಿತರಿದ್ದರು.

# ಮೂಲಭೂತ ಹಕ್ಕುಗಳು ಸಂವಿಧಾನದ ಕೊಡುಗೆ



ಕಸಾಪ ಗಣರಾಜ್ಯೋತ್ಸವದಲ್ಲಿ ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ

ದಾವಣಗೆರೆ, ಜ. 28- ನಮ್ಮ ದೇಶದ ಸಂವಿಧಾನವು ವಿಶ್ವದಲ್ಲೇ ಅತ್ಯಂತ ಶ್ರೇಷ್ಠ. ಇಂದು ನಾವು ಅನುಭವಿಸುತ್ತಿರುವ ಮೂಲಭೂತ ಹಕ್ಕುಗಳು ಸಂವಿಧಾನ ನೀಡಿರುವ ಕೊಡುಗೆಯಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ನಿಕಟಪೂರ್ವ ಅಧ್ಯಕ್ಷ ಡಾ. ಹೆಚ್. ಎಸ್. ಮಂಜುನಾಥ ಕುರ್ಕಿ ತಿಳಿಸಿದ್ದಾರೆ.

ಜಿಲ್ಲಾ ಮತ್ತು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡುತ್ತಿದ್ದರು.

ಶ್ರೇಷ್ಠ ಸಂವಿಧಾನ ಹೊಂದಲು ಕಾರಣೀ ಕರ್ತರಾದ ಡಾ.ಬಿ.ಆರ್. ಅಂಬೇಡ್ಕರ್ ಆದಿಯಾಗಿ ಎಲ್ಲ ಮಹನೀಯರನ್ನು ಗಣರಾಜ್ಯೋತ್ಸವ ಸಂದರ್ಭದಲ್ಲಿ ಸ್ಮರಿಸಬೇಕಿದೆ. ಸಂವಿಧಾನದ ಆಶಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಪರಿಪಾಲನೆ ಮಾಡುವುದೇ ಸಂವಿಧಾನಕ್ಕೆ ನಾವು ಸಲ್ಲಿಸುವ ನಿಜವಾದ ಗೌರವವಾಗಿದೆ ಎಂದು ಕುರ್ಕಿ ಅಭಿಪ್ರಾಯಪಟ್ಟರು.

ಇತ್ತೀಚಿನ ದಿನಗಳಲ್ಲಿ ಸಂವಿಧಾನ, ಪ್ರಜಾಪ್ರಭುತ್ವದ ಹೆಸರಿನಲ್ಲಿ ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಅನಾಚಾರ, ಸ್ವೇಚ್ಛಾಚಾರ ಮಿತಿ ಮೀರುತ್ತಿರುವುದು ಪ್ರಜಾಪ್ರಭುತ್ವ, ಸಂವಿಧಾನದ ಆಶಯವನ್ನು ಅಣಕಿಸುವಂತಾಗಿರುವುದು ದುರಂತವಾಗಿದೆ ಎಂದು ಕುರ್ಕಿ ಖೇದ ವ್ಯಕ್ತಪಡಿಸಿದರು.

ಕಸಾಪ ಮಾಜಿ ಅಧ್ಯಕ್ಷ ಎ.ಆರ್. ಉಜ್ಜನಪ್ಪ, ಕಸಾಪ ಗೌರವ ಕಾರ್ಯದರ್ಶಿ ಬಿ. ದಿಳ್ಯೆಪ್ಪ, ಎಐಟಿಯುಸಿ ಜಿಲ್ಲಾಧ್ಯಕ್ಷ ಕೆ. ರಾಘವೇಂದ್ರ ನಾಯರಿ, ಸಂತೇಬೆನ್ನೂರು ಸಿರಾಜ್ ಅಹ್ಮದ್, ಪಾಲಾಕ್ಷಪ್ಪ ಗೋಪನಾಳ್, ಬೇತೂರು ಷಡಾಕ್ಷರಪ್ಪ, ಜಿ.ಆರ್. ಷಣ್ಮುಖಪ್ಪ, ಕಸಾಪ ತಾಲ್ಲೂಕು ಅಧ್ಯಕ್ಷರಾದ ಸುಮತಿ ಜಯಪ್ಪ, ಪರಮೇಶ್ವರಪ್ಪ ದಾಗಿನಕಟ್ಟೆ, ಸತ್ಯಭಾಮ ಮಂಜುನಾಥ್, ವೀಣಾ ಕೃಷ್ಣಮೂರ್ತಿ, ನಾಗವೇಣಿ, ಸುದರ್ಶನ್ ಕುಮಾರ್, ಬಿ.ಎಸ್. ಜಗದೀಶ್, ಭೈರವೇಶ್ವರ, ಕೆ.ಬಿ. ಪರಮೇಶ್ವರಪ್ಪ, ಶಾಮನೂರು ಸಿದ್ದಣ್ಣ, ಕೊರಟಿಕೆರೆ ಡಿ.ಎಂ. ಶಿವಕುಮಾರ್, ಬಿ.ವಿ. ರಾಜಶೇಖರ್, ಎಂ.ಎ. ಶೀತಲ್, ಪರಮೇಶ್ವರಪ್ಪ, ಕೆ.ಪಿ. ಬಸವರಾಜಪ್ಪ, ಸಿ.ಕೆ. ಸಿದ್ದಣ್ಣ, ಎ. ಮಹೇಶ್ವರಪ್ಪ, ಜಿ.ಬಿ. ಸಿದ್ದಪ್ಪ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ನ್ಯಾಯಾಧೀಶರಾದ ಮಲ್ಲಿಕಾರ್ಜುನ ಗೌಡರ ವಜಾಕ್ಕೆ ನಗರದ ವಕೀಲರ ಒತ್ತಾಯ



ದಾವಣಗೆರೆ, ಜ.28- ರಾಯಚೂರು ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ನಡೆದ 73ನೇ ಗಣರಾಜ್ಯೋತ್ಸವದ ಸಂದರ್ಭದಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್ ಅಂಬೇಡ್ಕರ್‌ರವರ ಭಾವಚಿತ್ರ ತೆಗೆಸಿ, ಅಪಮಾನ ಮಾಡಿದ ಅಲ್ಲಿನ ಜಿಲ್ಲಾ ನ್ಯಾಯಧೀಶರಾದ ಮಲ್ಲಿಕಾರ್ಜುನ ಗೌಡರನ್ನು ಈ ಕೂಡಲೇ ವಜಾ ಮಾಡಬೇಕೆಂದು ಆಗ್ರಹಿಸಿ, ನಗರದ ವಕೀಲರು, ವಿವಿಧ ಸಂಘಟನೆಗಳ ಮುಖಂಡರು ಜಿಲ್ಲಾಧಿಕಾರಿಗಳ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ಗಣರಾಜ್ಯೋತ್ಸವ ದಿನ ದಂದು ಅಂಬೇಡ್ಕರ್ ಭಾವಚಿತ್ರ ಹಾಕಲು ಸರ್ಕಾರದ ನಿರ್ದೇಶನ ವಿದೆ. ಹೀಗಿದ್ದಾಗ ನ್ಯಾಯಾ ಧೀಶರು ಸಂವಿಧಾನ ಮತ್ತು ಶಿಷ್ಟಾಚಾರವನ್ನು ಪಾಲನೆ ಮಾಡಿ ಇತರರಿಗೆ ಮಾದರಿಯಾಗಬೇಕು. ಆದರೆ ನ್ಯಾಯಾಧೀಶರಿಂದ ಸಂವಿ ಧಾನ ಶಿಲ್ಪಿಗೆ ಅಪಮಾನವಾಗಿದೆ ಎಂದು ಮನವಿ ಪತ್ರದಲ್ಲಿ ತಿಳಿಸಲಾಗಿದೆ.

ಈ ಸಂದರ್ಭದಲ್ಲಿ ಹಿರಿಯ ವಕೀಲರಾದ ಅನೀಸ್ ಪಾಷ, ಎಲ್.ಹೆಚ್. ಅರುಣ್ ಕುಮಾರ್, ರಂಗಸ್ವಾಮಿ ಕೆ.ಕೆ, ಕೃಷ್ಣನಾಯ್ಕ, ಬಿ.ಕೆ. ಮಲ್ಲಿಕಾರ್ಜುನ್, ವಿಶ್ವನಾಥ್, ಅಬ್ದುಲ್ ಸಮದ್, ಖಲೀಲ್, ಉಷಾ ಕೈಲಾಸದ್, ಜ್ಯೋತಿ, ಎಸ್. ರಾಜಪ್ಪ, ಮುಖಂಡರುಗಳಾದ ಕೆ. ತಿಪ್ಪಣ್ಣ, ಹೆಚ್.ಸಿ. ಗುಡ್ಡಪ್ಪ, ಅಂಜಿನಪ್ಪ, ರಾಘವೇಂದ್ರ ಡಿ.ಜಿ. ದಾನಪ್ಪ, ಸತೀಶ್ ಅರವಿಂದ್, ಮುಸ್ತಾಫಾ ಮತ್ತಿತರರು ಉಪಸ್ಥಿತರಿದ್ದರು.

# ಜನಾಶೀರ್ವಾದ ಇರುವವರೆಗೆ ಯಾರೂ ತಬ್ಬಲಿಯಾಗಲ್ಲ

## ಇಬ್ರಾಹಿಂ ಕುರಿತು ಸಿದ್ದರಾಮಯ್ಯ ಹೇಳಿಕೆ

ಬೆಂಗಳೂರು, ಜ. 28 - ರಾಜ್ಯದ ಜನರ ಆಶೀರ್ವಾದ ಇರುವವರೆಗೆ ಯಾರೂ ತಬ್ಬಲಿಯಾಗಲ್ಲ, ಅದು ಇಬ್ರಾಹಿಂ ಆದರೂ ಅಷ್ಟೇ, ನಾನೇ ಆದರೂ ಅಷ್ಟೆ. ಜನರ ಪ್ರೀತಿ, ವಿಶ್ವಾಸ ಮಾತ್ರ ಮುಖ್ಯ ಎಂದು ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅಭಿಪ್ರಾಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಬ್ರಾಹಿಂ ಅವರು ಪಕ್ಷ ತೊರೆಯಲ್ಲ, ಜೆಡಿಎಸ್‌ಗೆ ಹೋಗಲ್ಲ. ಈ ಹಿಂದೆ ಅವರಿಗೆ ರಾಜ್ಯಸಭಾ ಸ್ಥಾನವನ್ನು ತಪ್ಪಿಸಿದ್ದೇ ದೇವೇಗೌಡರು. ಹಾಗಾಗಿ ಅವರು ಮತ್ತೆ ಜೆಡಿಎಸ್‌ಗೆ ಹೋಗಲ್ಲ ಎಂದು ನನಗನಿಸುತ್ತಿದೆ ಎಂದರು.

ಇಬ್ರಾಹಿಂ ಅವರು ಕೋಪದಲ್ಲಿ ಕಾಂಗ್ರೆಸ್ ಬಿಡುತ್ತೇನೆ ಎಂದಿರಬಹುದು, ನಾನು ಅವರ ಜೊತೆ ಮಾತನಾಡುತ್ತೇನೆ. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತೆ ಎಂದು ಅವರಿಗೂ ಗೊತ್ತಿದೆ. ನನಗೆ ಬಾದಾಮಿಯಿಂದ ಸ್ಪರ್ಧೆ ಮಾಡಿ ಎಂದು ಹೇಳಿದವರಲ್ಲಿ ಇಬ್ರಾಹಿಂ ಕೂಡ ಒಬ್ಬರು. ಅವರು ನನಗೆ ಒಳ್ಳೆಯ ಸ್ನೇಹಿತ, ನನ್ನ ಬಗ್ಗೆ ಏನೇ ಹೇಳಿದರೂ ಅದು ನನಗೆ ಶುಭ ಹಾರೈಸಿದ ಹಾಗೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಸಂವಿಧಾನ ಜಾರಿಗೆ ಬಂದ ದಿನವನ್ನು ಗಣರಾಜ್ಯೋತ್ಸವ ದಿನವಾಗಿ ಆಚರಣೆ ಮಾಡುತ್ತೇವೆ. ಸಂವಿಧಾನ ರಚನೆ ಮಾಡಿದ್ದು ಬಾಬಾ ಸಾಹೇಬ್ ಅಂಬೇಡ್ಕರ್ ಅವರು. ಅವರ ಚಿತ್ರ ತೆಗೆಯಿರಿ ಎಂದು ನ್ಯಾಯಾಧೀಶರು ಹೇಳಿರುವುದು ಅಕ್ಷಮ್ಯ ಅಪರಾಧ. ಅವರ ಮೇಲೆ ಹೈಕೋರ್ಟ್ ನ ಮುಖ್ಯ ನ್ಯಾಯಮೂರ್ತಿಗಳು ಕ್ರಮ ಕೈಗೊಳ್ಳಬೇಕು ಎಂದವರು ಇದೇ ಸಂದರ್ಭದಲ್ಲಿ ಹೇಳಿದ್ದಾರೆ.

# ಆಹಾರ ಸಂಸ್ಕರಣೆ ಉದ್ದಿಮೆದಾರರಿಗೆ ಸುವರ್ಣಾವಕಾಶ : ಸಹಾಯ ಧನ ಏರಿಕೆ

ದಾವಣಗೆರೆ, ಜ.28- ಆತ್ಮನಿರ್ಭರ್ ಭಾರತ ಅಭಿಯಾನದಡಿ ಕೇಂದ್ರ ಸರ್ಕಾರ ಜಾರಿಗೆ ತಂದಿರುವ 'ಒಂದು ಜಿಲ್ಲೆ ಒಂದು ಉತ್ಪನ್ನ' (ಪಿಎಂಎಫ್‌ಎಂಇ) ಯೋಜನೆಯಡಿ ದಾವಣಗೆರೆ ಜಿಲ್ಲೆಗೆ ಸಿರಿಧಾನ್ಯ ಬೆಳೆಗಳು ಆಯ್ಕೆಯಾಗಿದ್ದು, ಜಿಲ್ಲೆಯಲ್ಲಿ ಹೊಸದಾಗಿ ಸ್ಥಾಪಿಸುವ ಸಿರಿಧಾನ್ಯ ಆಧಾರಿತ ಸಂಸ್ಕರಣಾ ಘಟಕಗಳು ಹಾಗೂ ಹಾಲಿ ಕಾರ್ಯನಿರ್ವಹಿಸುತ್ತಿರುವ ಇತರೆ ಅಸಂಘಟಿತ ಕಿರು ಆಹಾರ ಸಂಸ್ಕರಣ ಉದ್ದಿಮೆಗಳ ಉನ್ನತೀಕರಣ ಹಾಗೂ ವಿಸ್ತರಣೆಗೆ ಈ ಯೋಜನೆಯು ಅತ್ಯುತ್ತಮ ಅವಕಾಶವನ್ನು ಕಲ್ಪಿಸುತ್ತದೆ.

ಯೋಜನೆಯಡಿ ಕಿರು ಆಹಾರ ಸಂಸ್ಕರಣ ಉದ್ದಿಮೆಗಳಿಗೆ ಬೆಂಬಲ ನೀಡಲು ಕೇಂದ್ರ ಸರ್ಕಾರದಿಂದ ಶೇ.35 ರಷ್ಟು ಸಾಲ ಸಂಪರ್ಕಿತ ಸಹಾಯ ಧನವನ್ನು ನೀಡಲಾಗುತ್ತಿದ್ದು, ಈ ಯೋಜನೆಗೆ ರಾಜ್ಯ ಸರ್ಕಾರವು ಇನ್ನೂ ಹೆಚ್ಚಿನ ಒತ್ತು ನೀಡಬೇಕೆಂಬ ಉದ್ದೇಶದಿಂದ ಕೇಂದ್ರ ಸರ್ಕಾರದ ಶೇ.35ರಷ್ಟು ಸಹಾಯ ಧನದ ಜೊತೆಗೆ ಶೇ.15 ರಷ್ಟು ಹೆಚ್ಚುವರಿ ಸಹಾಯ ಧನ ನೀಡಲು ಪರಿಷ್ಕೃತ ಮಾರ್ಗಸೂಚಿಯನ್ನು ಬಿಡುಗಡೆ ಮಾಡಿದೆ. ಹೀಗಾಗಿ ಪ್ರಸ್ತುತ ಯೋಜನೆಯಡಿಯಲ್ಲಿ ಕಿರು ಆಹಾರ ಉದ್ಯಮಗಳನ್ನು ಸ್ಥಾಪಿಸಲು ಇಚ್ಛಿಸುವ ಅರ್ಹ ಫಲಾನುಭವಿಗಳಿಗೆ ಸಾಲ ಸಂಪರ್ಕಿತ ಸಹಾಯ ಧನ ಶೇ.50 ಕ್ಕೆ ಏರಿಕೆಯಾದಂತಾಗಿದೆ.

ಆಹಾರ ಸಂಸ್ಕರಣೆಯಲ್ಲಿ ಆಸಕ್ತಿಯಿರುವ ವೈಯಕ್ತಿಕ ಕಿರು ಆಹಾರ ಸಂಸ್ಕರಣಾ ಘಟಕಗಳು, ರೈತ ಉತ್ಪಾದಕ ಕಂಪನಿಗಳು, ಸ್ವ-ಸಹಾಯ ಸಂಘಗಳು, ಸಹಕಾರ ಸಂಘಗಳು ಈ ಯೋಜನೆಯಲ್ಲಿ ಪಾಲ್ಗೊಳ್ಳಲು ಅವಕಾಶವಿದ್ದು, ಯೋಜನೆಯಡಿ ಅರ್ಜಿ ಸಲ್ಲಿಸಲು ಕೇಂದ್ರ ಸರ್ಕಾರದ ಆಹಾರ ಸಂಸ್ಕರಣಾ ಕೈಗಾರಿಕೆಗಳ ಮಂತ್ರಾಲಯ (ಪಿಎಂಎಫ್‌ಎಂಇ) ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡು ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕೃಷಿ ನಿರ್ದೇಶಕರು, ವಿಷಯ ತಜ್ಞರ ಮೊಬೈಲ್ ಸಂಖ್ಯೆ 8277931105 ಅಥವಾ ಹತ್ತಿರದ ರೈತ ಸಂಪರ್ಕ ಕೇಂದ್ರ, ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯನ್ನು ಸಂಪರ್ಕಿಸಬಹುದು ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

# ವಾಸವಿ ಕ್ಲಬ್ ದೇವನಗರಿ ಅಧ್ಯಕ್ಷರಾಗಿ ಕೆ.ವಿ.ರಂಗನಾಥ್





ದಾವಣಗೆರೆ, ಜ. 28- ವಾಸವಿ ಕ್ಲಬ್ ದೇವನಗರಿಗೆ 2022ನೇ ಸಾಲಿನ ಅಧ್ಯಕ್ಷರಾಗಿ ಕೆ.ವಿ.ರಂಗನಾಥ್, ಪ್ರಧಾನ ಕಾರ್ಯದರ್ಶಿಯಾಗಿ ಶ್ರೀಮತಿ ಬಿ.ಸಿ. ವರಮಹಾಲಕ್ಷ್ಮಿ, ಖಜಾಂಚಿಯಾಗಿ ಪಿ.ಎಸ್. ರವಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಗರದ ರೋಟರಿ ಬಾಲಭವನದಲ್ಲಿ ನಾಡಿದ್ದು ದಿನಾಂಕ 30ರ ಭಾನುವಾರ ಬೆಳಿಗ್ಗೆ 11.30ಕ್ಕೆ ಹಾಲಿ ಅಧ್ಯಕ್ಷ ಆರ್.ಸಿ.ರಮೇಶ್ ಅಧ್ಯಕ್ಷತೆಯಲ್ಲಿ ನಡೆಯುವ ಪದಗ್ರಹಣ ಕಾರ್ಯಕ್ರಮದಲ್ಲಿ ಕ್ಲಬ್‌ನ ರಾಜ್ಯಪಾಲ ಆರ್. ಶ್ರೀನಿವಾಸ್ ನೂತನ ಪದಾಧಿಕಾರಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಲಿದ್ದಾರೆ.

**ಮುಖ್ಯ ಅತಿಥಿಗಳು :** ಸಿಎಂಎಲ್ ದಿಲೀಪ್, ಕ್ಯಾಬಿನೆಟ್ ಸೆಕ್ರೆಟರಿ ಬಿ. ನಾಗಮಹೇಶ್, ಪಿ.ವಿ. ಲಕ್ಷ್ಮಿನಾರಾಯಣ ಶೆಟ್ಟಿ, ಕೆ.ಆರ್.ಶಂಕರ್, ಕಲಾ ಪ್ರದೀಪ್, ಎನ್. ಶ್ಯಾಮ್ ಸುಂದರ್, ಬಿ.ಎ. ಚಂದ್ರಕುಮಾರ್ ಶೆಟ್ಟಿ, ಕೆ.ಜೆ. ಪ್ರಸಾದ್.

# ನಗರದಲ್ಲಿ ಇಂದು 3 ಕೃತಿಗಳ ಲೋಕಾರ್ಪಣೆ

ಸೃಷ್ಟಿ ಗ್ರಂಥಮಾಲೆ (ಚಿತ್ರದುರ್ಗ) ಹಾಗೂ ಎಸ್‌ಆರ್‌ಪಿ ಸಮೂಹ ಸಂಸ್ಥೆಗಳು (ದಾವಣಗೆರೆ) ಇವರ ಸಂಯುಕ್ತಾಶ್ರಯದಲ್ಲಿ ಹಂಶಿ ಸಂಪಾದಕೀಯ ಕೃತಿ ಅಂತಃಕರಣದೊಡೆಯ ಅಪ್ಪು-ಗೆ ಕವನ ಸಂಕಲನ, ಎಸ್. ಓಂಕಾರಯ್ಯ ತವನಿಧಿ ವಿರಚಿತ ವೃಷ್ಟಿ ವೃತ್ತಾಂತ ವೈಜ್ಞಾನಿಕ ಸಂಶೋಧನಾ ಕೃತಿ, ಹಂಶಿ ವಿರಚಿತ ಬೇಲಿಯ ಹೂವು ಕಾದಂಬರಿ ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮವು ಇಂದು ಬೆಳಿಗ್ಗೆ 11 ಕ್ಕೆ ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ. ಕಾರ್ಯಕ್ರಮವನ್ನು ವಾಸುದೇವ್ ರಾಯ್ಕರ್ ಉದ್ಘಾಟಿಸಲಿದ್ದು, ಜಿ.ಎಂ.ಆರ್. ಆರಾಧ್ಯ ಅಧ್ಯಕ್ಷತೆ ವಹಿಸುವರು. ಬಿ.ಎನ್. ಮಲ್ಲೇಶ್, ಡಾ. ಲೋಕೇಶ್ ಅಗಸನಕಟ್ಟೆ, ಎಂ.ಟಿ. ಶರಣಪ್ಪ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಮಧ್ಯಾಹ್ನ 2.30 ರಿಂದ ನಡೆಯುವ ಕಾರ್ಯಕ್ರಮವನ್ನು ಚಿತ್ರ ನಿರ್ದೇಶಕ ನವರಸನ್ ಉದ್ಘಾಟಿಸಲಿದ್ದು, ಜಿ.ಹೆಚ್. ರಾಜಶೇಖರ್ ಗುಂಡಗಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ತ್ಯಾವಣಿಗೆ ವೀರಭದ್ರಸ್ವಾಮಿ, ಎನ್. ರಾಘವೇಂದ್ರ ಪಾಲ್ಗೊಳ್ಳಲಿದ್ದಾರೆ.

# ನ್ಯಾಯಾಧೀಶ ಮಲ್ಲಿಕಾರ್ಜುನ ಗೌಡರ ವರ್ತನೆಗೆ ಎಸ್ಸಿ-ಎಸ್ಟಿ ಸಮುದಾಯಗಳ ಒಕ್ಕೂಟದ ಖಂಡನೆ

ದಾವಣಗೆರೆ, ಜ.28- ರಾಯಚೂರಿನ ಸತ್ರ ನ್ಯಾಯಾಲಯದ ಆವರಣದಲ್ಲಿ ಗಣರಾಜ್ಯೋತ್ಸವ ದಿನದಂದು ಮಹಾತ್ಮ ಗಾಂಧೀಜಿ ಭಾವಚಿತ್ರದ ಜೊತೆಗೆ ಇರಿಸಿದ್ದ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಭಾವಚಿತ್ರವನ್ನು ತೆಗೆಯಿಸಿ, ಭಾರತ ಸಂವಿಧಾನ ಹಾಗೂ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಉಂಟುಮಾಡಿರುವ ನ್ಯಾಯಾಧೀಶರಾದ ಮಲ್ಲಿಕಾರ್ಜುನ ಗೌಡ ಅವರನ್ನು ಕೂಡಲೇ ಹುದ್ದೆಯಿಂದ ಬಿಡುಗಡೆಗೊಳಿಸಬೇಕು ಎಂದು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಸಮುದಾಯಗಳ ಒಕ್ಕೂಟದ ಮುಖಂಡರಾದ ಪ್ರೊ.ಎ.ಬಿ. ರಾಮಚಂದ್ರಪ್ಪ ಒತ್ತಾಯಿಸಿದ್ದಾರೆ.

ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಭಾವಚಿತ್ರ ತೆಗೆದರೆ ಮಾತ್ರ ಧ್ವಜಾರೋಹಣ ಮಾಡುತ್ತೇನೆಂದು ಉದ್ಧಟತನದ ಮಾತುಗಳನ್ನಾಡಿದ ಮಲ್ಲಿಕಾರ್ಜುನಗೌಡ ಅವರನ್ನು ದೇಶದ್ರೋಹ ಕಾಯ್ದೆ ಅಡಿ ಪ್ರಕರಣ ದಾಖಲಿಸಿ, ಕಾನೂನಾತ್ಮಕವಾಗಿ ಶಿಕ್ಷಿಸಬೇಕು ಎಂದು ಆಗ್ರಹಿಸಿದರು.

ಬಂಜಾರ ಸಮಾಜದ ರಾಘವೇಂದ್ರ ನಾಯ್ಕ, ಹಾಲೇಕಲ್ ಚಂದ್ರಾನಾಯ್ಕ, ನಾಯಕ ಸಮಾಜದ ಬಿ. ವೀರಣ್ಣ, ಭೋವಿ ಸಮಾಜದ ವಿ. ಗೋಪಾಲ್, ಮಾದಿಗ ಸಮಾಜದ ಹೆಗ್ಗೆರೆ ರಂಗಪ್ಪ ಮತ್ತಿತರರು ಮಾತನಾಡಿ, ರಾಯಚೂರು ನ್ಯಾಯಾಧೀಶರ ವರ್ತನೆಯನ್ನು ಖಂಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ನಿವೃತ್ತ ಎಸ್ಪಿ ಎನ್. ರುದ್ರಮುನಿ, ಶೇಖರಪ್ಪ, ಹೆಚ್. ಜಯಣ್ಣ, ಡಾ. ಜಗನ್ನಾಥ್, ಪಿ.ಎಸ್. ರಾಮಯ್ಯ, ಬಿ. ಹನುಮಂತಪ್ಪ, ನಂಜಾನಾಯ್ಕ, ಶ್ರೀನಿವಾಸ್, ಹಾಲೇಶ್ ಮತ್ತಿತರರು ಉಪಸ್ಥಿತರಿದ್ದರು.

### ಡಾ. ಅಂಬೇಡ್ಕರ್ ಅವರಿಗೆ ಅಪಮಾನ :

# ಗಡೀಪಾರು ಮಾಡಲು ಆಗ್ರಹ



ದಾವಣಗೆರೆ, ಜ. 28- ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಅಪಮಾನ ಮಾಡಿದರೆನ್ನಲಾದ ರಾಯಚೂರು ಜಿಲ್ಲಾ ನ್ಯಾಯಾಧೀಶರಾದ ಮಲ್ಲಿಕಾರ್ಜುನ ಗೌಡರನ್ನು ಸೇವೆಯಿಂದ ಅಮಾನತ್ತುಗೊಳಿಸಿ, ಅವರ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸಿ ಗಡೀಪಾರು ಮಾಡುವಂತೆ ಮಾನವ ಹಕ್ಕುಗಳ ಹೋರಾಟ ಸಮಿತಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಹೆಚ್. ತಿಮ್ಮಣ್ಣ ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ನ್ಯಾ. ಮಲ್ಲಿಕಾರ್ಜುನಗೌಡ ಅವರು ಅಂಬೇಡ್ಕರ್ ಅವರ ಭಾವಚಿತ್ರವನ್ನು ತೆಗೆದಲ್ಲಿ ಮಾತ್ರ ಧ್ವಜಾರೋಹಣ ಮಾಡುವುದಾಗಿ ಹೇಳಿದ್ದಾರೆ. ಇದು ಅಂಬೇಡ್ಕರ್ ಅವರಿಗೆ ಮಾಡಿದ ದೊಡ್ಡ ಅಪಮಾನ. ಇದು ನ್ಯಾಯಾಧೀಶರ ಜಾತಿವಾದಿ ಮನಸ್ಥಿತಿಯನ್ನು ತೋರ್ಪಡಿಸುತ್ತದೆ. ಅಂಬೇಡ್ಕರ್ ಅವರಿಗೆ ಅಪಮಾನ ಮಾಡಿರುವ ಇವರ ದಲಿತ ವರ್ಗಕ್ಕೆ ಯಾವ ರೀತಿ ನ್ಯಾಯ ನಿರೀಕ್ಷಿಸಲು ಸಾಧ್ಯ ಎಂದು ಅಸಮಾಧಾನ ವ್ಯಕ್ತಪಡಿಸಿದರು.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಸದ್ಯೋಜಾತ ಮಠ, ಎಂಸಿಸಿ ಬಿ ಬ್ಲಾಕ್, ಶ್ರೀನಿವಾಸ್ ಶೆಟ್ಟಿ ಪಾರ್ಕ್ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ಈ ಮೇಲ್ಕಂಡ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

# ಇಟ್ಟಿಗೆ ಭಟ್ಟಿ ಕಾರ್ಮಿಕರ ಆರೋಗ್ಯ ತಪಾಸಣೆ



## ಹರಿಹರ

ಹರಿಹರ, ಜ. 28 – ಸಮೀಪದ ಕುಮಾರಪಟ್ಟಣದ ನದಿ ಪಾತ್ರದಲ್ಲಿರುವ ಇಟ್ಟಿಗೆ ಭಟ್ಟಿಗಳಲ್ಲಿ ಕೆಲಸ ಮಾಡುವ ವಲಸೆ ಕಾರ್ಮಿಕರ ಆರೋಗ್ಯ ತಪಾಸಣೆ ನಡೆಸಲಾಗಿದ್ದು, ಲಸಿಕೆ ಹಾಕಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಮುನ್ನೂರು ಕಿ.ಮೀ.ಗಳ ದೂರದಿಂದಲೂ ಹೊಟ್ಟೆಪಾಡಿಗಾಗಿ ಜನರು ಭಟ್ಟಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ತಾಲ್ಲೂಕು ಆರೋಗ್ಯ ಅಧಿಕಾರಿ ಟಿ.ಜಿ. ರಮೇಶ ನೇತೃತ್ವದಲ್ಲಿ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಕಾರ್ಮಿಕರ ಆರೋಗ್ಯ ವಿಚಾರಿಸಿದರು.

ಸಮುದಾಯ ಆರೋಗ್ಯ ಅಧಿಕಾರಿ ಬಿ.ಸಿ. ಸ್ಫಟಿಕ ಅವರು ಇಟ್ಟಿಗೆ ಭಟ್ಟಿ ಮಹಿಳೆಯರಿಗೆ ಸ್ವಚ್ಛತೆಯ ಮೂಲಕ ಸೋಂಕು ರೋಗ ತಡೆಯುವ ಮಾಹಿತಿ ನೀಡಿದರು.

ಪ್ರಾಥಮಿಕ ಸುರಕ್ಷಾ ಅಧಿಕಾರಿ ರೇಖಾ ಕರೇಗೌಡರ್ ಅವರು ಮಕ್ಕಳಿಗೆ ಪೋಲಿಯೋ ಹನಿ ಮತ್ತು ಕೆಲಸಗಾರರಿಗೆ ಕೊರೊನಾ ಲಸಿಕೆ ಅಗತ್ಯದ ಕುರಿತು ತಿಳಿಸಿದರು.

ಲಸಿಕೆ ಬಾಕಿ ಇರುವವರು ತಕ್ಷಣವೇ ಲಸಿಕೆ ಪಡೆಯಲು ಕ್ರಮ ತೆಗೆದುಕೊಳ್ಳಲಾಯಿತು.

ಆಶಾ ಕಾರ್ಯಕರ್ತರಾದ ಸುಶಿಲಮ್ಮ ಲಸಿಕಾ ಅಭಿಯಾನದಲ್ಲಿ ಪಾಲ್ಗೊಂಡಿದ್ದರು. ಕೋಡಿಯಾಲ ಎರಡನೇ ವಾರ್ಡ್ ಪಂಚಾಯತ್ ಸದಸ್ಯ ಬಸವಣ್ಣೆಪ್ಪ ಹಾಗೂ ಸಾಮಾಜಿಕ ಕಾರ್ಯಕರ್ತ ಡಾ॥ ಜಿ ಜೆ ಮೆಹೆಂದಳೆ ಉಪಸ್ಥಿತರಿದ್ದರು.

# ನಗರದಲ್ಲಿಂದು ರೋಟರಿ ಉತ್ಸವ: ವಿವಿಧ ಸ್ಪರ್ಧೆಗಳು

ರೋಟರಿ ಕ್ಲಬ್ ದಾವಣಗೆರೆ ದಕ್ಷಿಣದ ವತಿಯಿಂದ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಪ್ರಯುಕ್ತ ಇಂದು ಸಂಜೆ 4 ಗಂಟೆಗೆ ರೋಟರಿ ಉತ್ಸವ ನಡೆಯಲಿದೆ.

ಉತ್ಸವದ ಅಂಗವಾಗಿ ಪ್ರಬಂಧ ಸ್ಪರ್ಧೆ, ಗಾಯನ ಸ್ಪರ್ಧೆ (ಸಿನಿಮಾ ಹಾಗೂ ಶಾಸ್ತ್ರೀಯ) ಚಿತ್ರಕಲಾ ಸ್ಪರ್ಧೆ, ಕವನ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

10 ನೇ ತರಗತಿಯೊಳಗಿರುವ ಶಾಲಾ ಮಕ್ಕಳು ಈ ಸ್ಪರ್ಧೆಯ ಸದಾವಕಾಶವನ್ನು ಬಳಸಿಕೊಳ್ಳಬೇಕು ಎಂದು ಕ್ಲಬ್ ಅಧ್ಯಕ್ಷ ಡಾ. ಎಸ್.ಹೆಚ್. ಸುಜಿತ್ ಕುಮಾರ್ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 9900520526, 8310013255.

# ಮಾಯಕೊಂಡ ತಾಲ್ಲೂಕು ರಚನೆಗೆ ಶಾಸ್ತ್ರಿ ಒತ್ತಾಯ

ದಾವಣಗೆರೆ, ಜ.28- ಮಾಯಕೊಂಡ ಗ್ರಾಮವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವಂತೆ ಮುಖ್ಯಮಂತ್ರಿಗಳನ್ನು ಮಾಯಕೊಂಡ ಪುರ ಅಭಿವೃದ್ಧಿ ಕ್ರಿಯಾಶೀಲ ವೇದಿಕೆ ಅಧ್ಯಕ್ಷ ಎಂ. ಎಸ್. ಕೆ. ಶಾಸ್ತ್ರಿ ಆಗ್ರಹಿಸಿದ್ದಾರೆ.

ಮಾಜಿ ಸಿಎಂ ಎಸ್.ಆರ್. ಬೊಮ್ಮಾಯಿ ಅವರು ಭದ್ರಾ ಮೇಲ್ದಂಡೆ ಯೋಜನೆ ಮಂಜೂರು ಮಾಡುವಂತೆ ಅಂದಿನ ಪ್ರಧಾನಿ ರಾಜೀವ್ ಗಾಂಧಿ ಅವರು ಚಳ್ಳಕೆರೆ ತಾಲ್ಲೂಕು ಮೀರಸಾಬಿಹಳ್ಳಿಗೆ ಬರಗಾಲ ವೀಕ್ಷಣೆಗೆ ಬಂದ ಸಂದರ್ಭದಲ್ಲಿ ಮನವಿ ಮಾಡಿದ್ದರ ಮೇರೆಗೆ ಭದ್ರಾ ಮೇಲ್ದಂಡೆ ಯೋಜನೆಗೆ ಕಾಯಕಲ್ಪ ದೊರೆತಿದೆ. ನಿಮ್ಮ ಅವಧಿಯಲ್ಲಿ ಮಾಯಕೊಂಡವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಿ ಎಂದು ಶಾಸ್ತ್ರಿ ಅವರು ಸಿಎಂ ಬೊಮ್ಮಾಯಿ ಅವರನ್ನು ಕೇಳಿಕೊಂಡಿದ್ದಾರೆ.

# ಖಾಸಗಿ ಬಸ್ ನಿಲ್ದಾಣದ ಕಾಮಗಾರಿಗೆ ವೇಗ ನೀಡಿ

## ಓದುಗರ ಪತ್ರ



**ಮಾನ್ಯರೇ,**

ದಿನದಿಂದ ದಿನಕ್ಕೆ ಮಹಾನಗರ ಪಾಲಿಕೆಯ ಮುಂದಿನ ಪಿ.ಬಿ. ರಸ್ತೆಯಲ್ಲಿ ಜನಸಂದಣಿ ಹೆಚ್ಚಾಗುತ್ತಿದೆ. ಹಳೆ ಕೋರ್ಟ್ ರಸ್ತೆಯಿಂದ ಬರುವ ಸರ್ಕಾರಿ ಮತ್ತು ಖಾಸಗಿ ಬಸ್ಸುಗಳಿಂದ ವಿಪರೀತವಾಗಿ ಸಂಚಾರ ದಟ್ಟಣೆ ಹೆಚ್ಚಾಗುತ್ತಿದೆ. ಇದರಿಂದಾಗಿ ಪಾದಚಾರಿಗಳಿಗೆ ಮಾತ್ರವಲ್ಲ ದ್ವಿಚಕ್ರ ವಾಹನ ಸವಾರರಿಗೂ ಸಂಚರಿಸುವುದು ಕಠಿಣವಾಗಿದೆ.

ನಗರ ಸಾರಿಗೆ, ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಮತ್ತು ಖಾಸಗಿ ಬಸ್ಸುಗಳು ಎಲ್ಲವೂ ಒಂದೇ ಕಡೆ ಕೂಡಿಕೊಳ್ಳುತ್ತಿರುವುದರಿಂದ ಕಷ್ಟವಾಗಿರುತ್ತದೆ. ಪಾಲಿಕೆ ಎದುರು ಭಾಗದ ರಸ್ತೆಯ ತುಂಬಾ ಕಿರಿದಾದ ಪ್ರದೇಶವಾಗಿದೆ.

ಆದ್ದರಿಂದ ಈ ಕೂಡಲೇ ನಿರ್ಮಾಣ ಹಂತದಲ್ಲಿರುವ ಖಾಸಗಿ ಬಸ್ ನಿಲ್ದಾಣದ ಕಾಮಗಾರಿಯನ್ನು ವೇಗವಾಗಿ ಮುಗಿಸಬೇಕೆಂದು ಅಥವಾ ಬಸ್ಸುಗಳು ನಿಲ್ಲಲು ಸಹಕರಿಸುವ ಹಾಗೇ ಕಟ್ಟಡದ ಕೆಳಭಾಗದ ನಿರ್ಮಾಣವನ್ನು ಮೊದಲ ಹಂತದಲ್ಲಿ ಪೂರ್ಣವಾಗಿ ಮುಗಿಸಿದಲ್ಲಿ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗುತ್ತದೆ.

**- ವೈ.ವಿ. ಭಟ್,**
ವಕೀಲರು, ಎಸ್.ಪಿ.ಎಸ್.ನಗರ, ದಾವಣಗೆರೆ.

# ಪ್ರಾಮಾಣಿಕ ಕಲಾವಿದರಾಗಲು ಶ್ರಮಿಸಬೇಕು



## ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಡಿ. ಮಹೇಂದ್ರ ಕರೆ

ದಾವಣಗೆರೆ, ಜ. 28- ಕೇವಲ ಪ್ರದರ್ಶನ, ಸ್ಪರ್ಧೆಗಾಗಿ ಮಾತ್ರ ಕಲಾ ಕೃತಿಗಳನ್ನು ರಚಿಸದೇ, ನಿಜವಾದ ಅರ್ಥದಲ್ಲಿ ಕಲಾವಿದರಾಗಬೇಕೆಂಬ ಉದ್ದೇಶದಿಂದ ಕಲಾಕೃತಿ ರಚಿಸಿ ಎಂದು ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಡಿ. ಮಹೇಂದ್ರ ತಿಳಿಸಿದರು.

ನಗರದ ದೃಶ್ಯಕಲಾ ಮಹಾವಿದ್ಯಾಲಯಕ್ಕೆ ನಿನ್ನೆ ಭೇಟಿ ನೀಡಿದ್ದ ಅವರು, ಮಹಾವಿದ್ಯಾಲಯದ ದೃಶ್ಯ ವಿಶ್ವ ಕಲಾ ಗ್ಯಾಲರಿ, ಕಲಾ ಪರಿಸರವನ್ನು ವೀಕ್ಷಿಸಿ ಮಾತನಾಡಿದರು.

ಪ್ರಾಮಾಣಿಕ ಕಲಾವಿದರಾಗಲು ಸತತ ಪ್ರಯತ್ನಿಸಿ, ನಿಮ್ಮೊಳಗಿನ ಸಂವೇದನೆಗಳಿಗೆ, ನಿಮ್ಮ ಸುತ್ತ ಮುತ್ತಲಿನ ಪರಿಸರದ ವಿದ್ಯಮಾನಗಳಿಗೆ ಕಲೆಯ ರೂಪ ನೀಡಲು ಹಿಂಜರಿಯಬೇಡಿ. ಯಾರನ್ನೋ ಮೆಚ್ಚಿಸಲು ಕಲಾಕೃತಿಗಳನ್ನು ರಚಿಸದೆ ನಿಮ್ಮ ಅಂತರಂಗ ಮೆಚ್ಚುವ ಕೃತಿಗಳನ್ನು ರಚಿಸಿ ಎಂದು ಅವರು ಕಿವಿಮಾತು ಹೇಳಿದು.

ಈ ಸಂದರ್ಭದಲ್ಲಿ ಮಹೇಂದ್ರ ಅವರನ್ನು ದೃಶ್ಯಕಲಾ ಮಹಾವಿದ್ಯಾಲಯದ ಸುವರ್ಣ ಸ್ಮರಣ ಸಂಚಿಕೆ ನೀಡಿ, ಸನ್ಮಾನಿಸಲಾಯಿತು. ಮಹಾವಿದ್ಯಾಲಯದ ಸಂಯೋಜನಾಧಿಕಾರಿ ಡಾ. ಸತೀಶ್‌ಕುಮಾರ್ ಪಿ.ವಲ್ಲೇಪುರೆ ಉಪಸ್ಥಿತರಿದ್ದರು.

ದತ್ತಾತ್ರೇಯ ಭಟ್ ಸ್ವಾಗತಿಸಿದರು. ದಾ ವಿ ವಿ ಫ್ಯಾಷನ್ ಡಿಸೈನ್ ವಿಭಾಗದ ಸಂಯೋಜನಾಧಿಕಾರಿ ಡಾ. ಜೈರಾಜ್ ಚಿಕ್ಕ ಪಾಟೀಲ್ ಉಪಸ್ಥಿತರಿದ್ದರು.


ಹೃದಯಪೂರ್ವಕ ಅಭಿನಂದನೆಗಳು



ದಾವಣಗೆರೆ ವಿಶ್ವವಿದ್ಯಾನಿಲಯವು ನಡೆಸಿದ ಪದವಿ, ಸ್ನಾತಕೋತರ ಪರೀಕ್ಷೆಯಲ್ಲಿ ಎಂ.ಎ. (ರಾಜ್ಯಶಾಸ್ತ್ರ) ಯಲ್ಲಿ ಪ್ರಥಮ ರ್‍ಯಾಂಕ್ ಪಡೆದಿರುವ ಹರಿಹರ ತಾಲ್ಲೂಕು ಕುಂಬಳೂರಿನ ಗ್ರಾಮ ಪಂಚಾಯಿತಿ ಸದಸ್ಯರಾದ ಶ್ರೀಮತಿ ಉಮಾದೇವಿ ಮತ್ತು ಶ್ರೀ ಶಿವರಾಮಚಂದ್ರಪ್ಪ ದಂಪತಿಯ ಪುತ್ರಿ


**ಕು. ಎಂ.ಎಸ್. ಪೂಜಾ**

ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

**ಬಿ. ವೀರಣ್ಣ,** ಅಧ್ಯಕ್ಷರು ದಾವಣಗೆರೆ ಜಿಲ್ಲಾ ವಾಲ್ಮೀಕಿ ನಾಯಕ ಸಮಾಜ, ಮಾಜಿ ಅಧ್ಯಕ್ಷರು, ನಗರಸಭೆ, ದಾವಣಗೆರೆ
**ಶ್ರೀಮತಿ ಲಕ್ಷ್ಮಿದೇವಿ ಬಿ. ವೀರಣ್ಣ** ಮಾಜಿ ಸದಸ್ಯರು ದಾವಣಗೆರೆ ಮಹಾನಗರ ಪಾಲಿಕೆ
**ಪೈಲ್ವಾನ್ ಮಹೇಶ್,** ಗ್ರಾಮ ಪಂಚಾಯಿತಿ ಮಾಜಿ ಸದಸ್ಯರು, ದೇವರಬೆಳಕೆರೆ
**ಜಿಗಳಿ ಆನಂದಪ್ಪ,** ಮಾಜಿ ಉಪಾಧ್ಯಕ್ಷರು, ಡಿಡಿಸಿಸಿ ಬ್ಯಾಂಕ್
**ಆರ್. ಮಲ್ಲಿಕಾರ್ಜುನ್,** ಯರಗುಂಟೆ

# ಯಡಿಯೂರಪ್ಪ ಮೊಮ್ಮಗಳ ಆತ್ಮಹತ್ಯೆ

## ಮೂರು ವರ್ಷದ ಹಿಂದೆ ಡಾ.ನೀರಜ್ ವಿವಾಹವಾಗಿದ್ದ ಸೌಂದರ್ಯ



ಬೆಂಗಳೂರು, ಜ. 28 - ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಮೊಮ್ಮಗಳು ಡಾ. ಸೌಂದರ್ಯ ಆತ್ಮಹತ್ಯೆಗೆ ಶರಣಾಗಿದ್ದಾರೆ. ಯಡಿಯೂರಪ್ಪನವರ ಎರಡನೇ ಪುತ್ರಿ ಪದ್ಮಾವತಿ ಅವರ ಮಗಳು ಸೌಂದರ್ಯ ಕಳೆದ ಮೂರು ವರ್ಷಗಳ ಹಿಂದೆಯಷ್ಟೇ ಡಾ. ನೀರಜ್ ಅವರನ್ನು ವಿವಾಹವಾಗಿದ್ದರು.

ಈ ದಂಪತಿಗೆ 9 ತಿಂಗಳ ಗಂಡು ಮಗು ಇದೆ. ಆತ್ಮಹತ್ಯೆಗೆ ಹಲವು ಕಾರಣಗಳನ್ನು ನೀಡುತ್ತಿದ್ದು, ಒಟ್ಟಾರೆ, ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ಪತಿ ನೀರಜ್ ಬೆಳಿಗ್ಗೆ 8 ಗಂಟೆಗೆ ಆಸ್ಪತ್ರೆಗೆ ತೆರಳಿದ ನಂತರ ಸರಿ ಸುಮಾರು 9 ಗಂಟೆ ಸಮಯಕ್ಕೆ ಸೌಂದರ್ಯ ನೇಣಿಗೆ ಶರಣಾಗಿದ್ದಾರೆ.

ನೇಣಿಗೆ ಶರಣಾಗುವುದಕ್ಕು ಮುನ್ನ ಮಗುವನ್ನು ಪಕ್ಕದ ಕೊಠಡಿಯಲ್ಲಿ ಮಲಗಿಸಿದ್ದರು ಎನ್ನಲಾಗಿದೆ. ಮನೆಯ ಕೆಲಸಗಾರರು ಒಡತಿ ಕೊಠಡಿಯಿಂದ ಬಹು ಸಮಯವಾದರೂ ಹೊರಬಾರದ್ದನ್ನು ಗಮನಿಸಿ, ಡಾ. ನೀರಜ್ ಅವರಿಗೆ ಮಾಹಿತಿ ನೀಡಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆ ಫ್ಲಾಟ್‌ಗೆ ಬಂದ ನೀರಜ್ ನೆರೆ ಹೊರೆಯವರ ಸಹಕಾರ ಪಡೆದು, ಕೊಠಡಿಯ ಬಾಗಿಲನ್ನು ತೆರೆದು ನೇಣಿಗೆ ಬಿಗಿದುಕೊಂಡಿದ್ದ ಪತ್ನಿಯನ್ನು ಕೆಳಗಿಳಿಸಿದ್ದಾರೆ. ತಕ್ಷಣವೇ ಪ್ರಾಥಮಿಕ ಚಿಕಿತ್ಸೆ ನೀಡುವ ಪ್ರಯತ್ನ ಮಾಡಿ, ನಂತರ ಸಮೀಪದ ಖಾಸಗಿ ಆಸ್ಪತ್ರೆಗೆ ಕರೆದೊಯ್ದಿದ್ದಾರೆ.

ಆಸ್ಪತ್ರೆಗೆ ಸಾಗಿಸುವ ಸಮಯದಲ್ಲೇ ಸೌಂದರ್ಯ ಕೊನೆಯುಸಿರೆಳೆದಿದ್ದರು ಎನ್ನಲಾಗಿದೆ. ನಂತರ ಅಲ್ಲಿಂದ ಬೌರಿಂಗ್ ಆಸ್ಪತ್ರೆಗೆ ಮೃತ ದೇಹವನ್ನು ಸಾಗಿಸಿ, ಶವ ಪರೀಕ್ಷೆ ನಡೆಸಲಾಯಿತು.

ಶವ ಪರೀಕ್ಷೆಯ ನಂತರ ಕಳೇಬರವನ್ನು ನಗರದ ಹೊರ ವಲಯದಲ್ಲಿರುವ ಪತಿಯ ಅಬ್ಬಿಗೆರೆ ತೋಟಕ್ಕೆ ಕೊಂಡೊಯ್ಯಲಾಯಿತು. ಪತ್ನಿ ಆತ್ಮಹತ್ಯೆಗೆ ಸಂಬಂಧಿಸಿದಂತೆ ನೀರಜ್ ನಗರದ ಹೈಗ್ರೌಂಡ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಅವರ ದೂರಿನ ಆಧಾರದ ಮೇಲೆ ಮುಂದಿನ ತನಿಖೆ ನಡೆಯಲಿದೆ. ಅಂತ್ಯಸಂಸ್ಕಾರ ಪೂರ್ಣಗೊಂಡ ನಂತರ ಸಾವಿನ ಬಗ್ಗೆ ಸ್ಪಷ್ಟ ಮಾಹಿತಿ ದೊರೆಯಬಹುದೆಂದು ಹೇಳಲಾಗಿದೆ.

ಕೌಟುಂಬಿಕ ಕಲಹದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಒಂದು ವರ್ಗ ಹೇಳಿದ್ದರೆ, ಮತ್ತೊಂದು ವರ್ಗ ಕಳೆದ ಕೆಲವು ತಿಂಗಳಿನಿಂದ ಅವರು ಖಿನ್ನತೆಗೆ ಒಳಗಾಗಿದ್ದರು ಎಂದು ಹೇಳುತ್ತಿದೆ. ಏಕೆ ಖಿನ್ನತೆಗೆ ಒಳಗಾಗಿದ್ದರು ಎಂಬ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ. ಈ ಮಧ್ಯೆ ಬೌರಿಂಗ್ ಆಸ್ಪತ್ರೆಯಲ್ಲಿ ಶವ ಪರೀಕ್ಷೆ ನಡೆಸಿದ ಡಾ. ಸತೀಶ್ ಅವರು, ಕತ್ತಿನ ಭಾಗದಲ್ಲಿ ಒಂದು ಗೆರೆ ಬಿಟ್ಟರೆ, ದೇಹದ ಯಾವುದೇ ಭಾಗದಲ್ಲೂ ಗಾಯವಾಗಿಲ್ಲ ಎಂದು ವರದಿಗಾರರಿಗೆ ತಿಳಿಸಿದ್ದಾರೆ.

ತನಿಖಾ ಅಧಿಕಾರಿಗಳಿಗೆ ಶವ ಪರೀಕ್ಷೆ ಪೂರ್ಣ ವರದಿಯನ್ನು ನೀಡಿದ್ದೇವೆ. ಮುಂದೆ ಅವರು ತೀರ್ಮಾನ ಕೈಗೊಳ್ಳುತ್ತಾರೆ ಎಂದು ತಿಳಿಸಿದ್ದಾರೆ. ಬೌರಿಂಗ್ ಆಸ್ಪತ್ರೆಯಿಂದ ಸೌಂದರ್ಯ ಅವರ ಕಳೇಬರ ಪತಿ ಅವರ ನಿವಾಸಕ್ಕೆ ತಲುಪುವ ವೇಳೆಗೆ ಯಡಿಯೂರಪ್ಪ ಮತ್ತು ಅವರ ಕುಟುಂಬ ವರ್ಗ ಮೊಮ್ಮಗಳ ಕಳೇಬರಕ್ಕಾಗಿ ನೆರೆದಿದ್ದರು.

ಸೌಂದರ್ಯ ತಂದೆ, ತಾಯಿ ಹುಬ್ಬಳ್ಳಿಯಿಂದ ನಗರಕ್ಕೆ ಆಗಮಿಸಿದ್ದಾರೆ. ಪತಿ ಡಾ. ನೀರಜ್ ಅವರ ತಂದೆ ಯಡಿಯೂರಪ್ಪ ಕುಟುಂಬಕ್ಕೆ ಆತ್ಮೀಯರು. ಅಷ್ಟೇ ಅಲ್ಲ, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿಯ ಮಾಜಿ ಅಧ್ಯಕ್ಷರು ಮತ್ತು ವಿವಿಧ ನಿಗಮಗಳ ಸದಸ್ಯರು ಆಗಿ ಸೇವೆ ಸಲ್ಲಿಸಿದ್ದರು.

ಯಡಿಯೂರಪ್ಪ ಅವರ ಪತ್ನಿ ಕೂಡಾ ಬಹಳ ವರ್ಷಗಳ ಹಿಂದೆ ಶಿವಮೊಗ್ಗದ ತಮ್ಮ ಮನೆಯಲ್ಲಿ ಆತ್ಮಹತ್ಯೆಗೆ ಒಳಗಾಗಿದ್ದನ್ನು ಇಲ್ಲಿ ಸ್ಮರಿಸಬಹುದು.

# ಪರೀಕ್ಷಾ, ಅಂಕಪಟ್ಟಿ ಶುಲ್ಕ ಏರಿಕೆ ಖಂಡಿಸಿ ಪ್ರತಿಭಟನೆ

## ಹರಪನಹಳ್ಳಿ : ಎನ್‌ಎಸ್‌ಯುಐ ಮನವಿ ಸಲ್ಲಿಕೆ




ಹರಪನಹಳ್ಳಿ, ಜ.28- ಸರ್ಕಾರಿ ಪದವಿ ಕಾಲೇಜಿನ ಪರೀಕ್ಷಾ ಶುಲ್ಕ ಹಾಗೂ ಅಂಕ ಪಟ್ಟಿ ಶುಲ್ಕ ಏರಿಕೆ ಖಂಡಿಸಿ ಎನ್.ಎಸ್.ಯು.ಐ ವತಿಯಿಂದ ಪ್ರತಿಭಟನೆ ನಡೆಸಿ ಪ್ರಾಂಶುಪಾಲರಿಗೆ ಮನವಿ ಸಲ್ಲಿಸಲಾಯಿತು

ಈ ವೇಳೆ ಎನ್.ಎಸ್.ಯು.ಐ ತಾಲ್ಲೂಕು ಅಧ್ಯಕ್ಷ ಎಂ.ಡಿ. ಶ್ರೀಕಾಂತ್ ಮಾತನಾಡಿ, ನೂತನ ವಿಜಯನಗರ ಜಿಲ್ಲೆಯಲ್ಲಿ ಇಲ್ಲದ ಶುಲ್ಕ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜಾಸ್ತಿ ಇದ್ದು ಕಾಲೇಜಿನ ಸಿಬ್ಬಂದಿಗಳು ಶುಲ್ಕ ಏರಿಕೆ ಬಗ್ಗೆ ಸರಿಯಾಗಿ ತಿಳಿಸದೆ ಹಿಂದುಳಿದ ಪರಿಶಿಷ್ಟ ಜಾತಿ, ಪಂಗಡದ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡುತ್ತಿದ್ದಾರೆ. ವಿಶ್ವವಿದ್ಯಾಲಯದ ಅಧಿಸೂಚನೆ ಪ್ರಕಾರ ಹಿಂದುಳಿದ, ಪರಿಶಿಷ್ಟ ಜಾತಿ, ಪಂಗಡದವರಿಗೆ 150 ರೂ ಶುಲ್ಕ ವಿದ್ದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 1050 ಶುಲ್ಕ ಕಟ್ಟಬೇಕು ಎಂದು ಹೇಳುತ್ತಿರುವುದು ವಿದ್ಯಾರ್ಥಿಗಳಲ್ಲಿ ಗೊಂದಲ ಸೃಷ್ಟಿದಂತಾಗಿದೆ.

ಈ ಕೂಡಲೇ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಲ್ಕ ಕಡಿಮೆ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಎನ್.ಎಸ್.ಯು.ಐ ತಾಲ್ಲೂಕು ಉಪಾಧ್ಯಕ್ಷ ಡಂಕಿ ವಾಸಿಂ, ಕಾರ್ಯದರ್ಶಿ ಶಮೀರ್, ಮುಖಂಡರುಗಳಾದ ದುರ್ಗೇಶ್, ಗಾಂಧಿ, ವೀರೇಶ್, ಮಂಜುನಾಥ, ಸಾಕೀಬ್, ಮೋಹನ್ ನಾಯ್ಕ, ನಂದೀಶ, ಕೋಟೆಪ್ಪ, ಸೇರಿದಂತೆ ಇತರರು ಇದ್ದರು.

# ಶಾಂತಿಸಾಗರ (ಸೂಳೆಕೆರೆ) : ಅರೆ ನೀರಾವರಿ ಬೆಳೆಗಳಿಗೆ ಮಾತ್ರ ನೀರು

ದಾವಣಗೆರೆ, ಜ.28- ಶಾಂತಿಸಾಗರ (ಸೂಳೆಕೆರೆ) ದಲ್ಲಿ 2022 ರ ಬೇಸಿಗೆ ಹಂಗಾಮಿಗೆ ನೀರು ಹರಿಸಲು ಕುಡಿಯುವ ನೀರು ಹೊರತುಪಡಿಸಿ ಸಿದ್ಧ ನಾಲಾ ಮತ್ತು ಬಸವ ನಾಲಾಗಳಿಗೆ ಏಪ್ರಿಲ್ 30 ರವರೆಗೆ ನಿರಂತರವಾಗಿ ನೀರನ್ನು ಅರೆ ನೀರಾವರಿ ಬೆಳೆಗಳನ್ನು ಬೆಳೆಯಲು ಮಾತ್ರ ಹರಿಸಲಾಗುವುದು ಎಂದು ಭದ್ರಾ ನಾಲಾ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ತಿಳಿಸಿದ್ದಾರೆ.

ಪ್ರಸಕ್ತ ಬೇಸಿಗೆ ಹಂಗಾಮಿಗೆ ಕುಡಿಯುವ ನೀರು 779 ಎ.ಸಿ.ಎಫ್.ಟಿ. ಹೊರತುಪಡಿಸಿ ಅರೆ ನೀರಾವರಿ ಮತ್ತು ತೋಟದ ಬೆಳೆಗೆ ಅವಶ್ಯವಿರುವ 1012 ಎಸಿಎಫ್‌ಟಿ ಕೆರೆಯಲ್ಲಿ ನೀರಿನ ಲಭ್ಯತೆ ಇರುವುದರಿಂದ ಜ. 20 ರಿಂದ ಏ. 30 ರವರೆಗೆ ಸಿದ್ಧ ನಾಲಾ-60 ಕ್ಯೂಸೆಕ್ಸ್ ಮತ್ತು ಬಸವ ನಾಲಾ- 45 ಕ್ಯೂಸೆಕ್ಸ್ ನಂತೆ ನಿರಂತರವಾಗಿ ನೀರನ್ನು ಅರೆ ನೀರಾವರಿ ಬೆಳೆಗಳನ್ನು ಬೆಳೆಯಲು ಮಾತ್ರ ಹರಿಸಲು ತೀರ್ಮಾನಿಸಲಾಗಿದೆ.

ಬೆಳೆ ಮಾದರಿ ಉಲ್ಲಂಘಿಸುವವರು, ನೀರಾವರಿ ಕಾಲುವೆ ಹಾಗೂ ಕಟ್ಟಡಗಳನ್ನು ಜಖಂಗೊಳಿಸುವವರು, ನಿಯಮಿತ ಪ್ರಮಾಣಿಕ್ಕಿಂತ ಹೆಚ್ಚು ನೀರನ್ನು ಬಳಸುವವರು ಮತ್ತು ಅನಧಿಕೃತ ನೀರಾವರಿ ಬೆಳೆಗಾರರು ಕರ್ನಾಟಕ ನೀರಾವರಿ ಕಾಯ್ದೆ 1965 ರ ವಿವಿಧ ನಿಯಮಗಳ ಪ್ರಕಾರ ಕಾನೂನು ಕ್ರಮಕ್ಕೆ ಒಳಗಾಗುತ್ತಾರೆ ಎಂದು ಎಚ್ಚರಿಸಿದ್ದಾರೆ.

ಬೇಸಿಗೆ ಹಂಗಾಮಿನಲ್ಲಿ ರೈತರು ಹೆಚ್ಚು ನೀರುಣ್ಣುವ ಬೆಳೆಯುವ ಭತ್ತವನ್ನು ಬೆಳೆಯದೇ, ಅರೆ ನೀರಾವರಿ ಬೆಳೆಯನ್ನು ಮಾತ್ರ ಬೆಳೆಯಲು ಸೂಚನೆ ನೀಡಲಾಗಿದೆ. ಪ್ರಕಟಿತ ಬೆಳೆಯನ್ನು ಬೆಳೆಯದೇ ಉಲ್ಲಂಘನೆ ಮಾಡಿ ಬೇರೆ ಬೆಳೆಯನ್ನು ಬೆಳೆದರೆ ಜಲಸಂಪನ್ಮೂಲ ಇಲಾಖೆಯ ಜವಾಬ್ದಾರಿಯಾಗುವುದಿಲ್ಲ. ಇದಕ್ಕೆ ರೈತರ ಸಹಕಾರ ಅತ್ಯಗತ್ಯ ಎಂದು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ನಂ.3 ಭದ್ರಾ ನಾಲಾ ಉಪವಿಭಾಗ ತ್ಯಾವಣಗಿ ಅಧಿಸೂಚನೆಯಲ್ಲಿ ತಿಳಿಸಿದ್ದಾರೆ.

# ಗಿರಿಯಮ್ಮ ಕಾಲೇಜಿಗೆ ನಾಲ್ಕು ರ್‍ಯಾಂಕ್



ಹರಿಹರ, ಜ.28- ದಾವಣಗೆರೆ ವಿಶ್ವವಿದ್ಯಾನಿಲಯದ ಬಿ.ಎ., ಬಿ.ಕಾಂ. ಸೆಮಿಸ್ಟರ್ ಪದವಿ ಪರೀಕ್ಷೆಗಳಲ್ಲಿ ಇಲ್ಲಿನ ಶ್ರೀಮತಿ ಗಿರಿಯಮ್ಮ ಆರ್. ಕಾಂತಪ್ಪ ಶ್ರೇಷ್ಠಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯಕ್ಕೆ ನಾಲ್ಕು ರ್‍ಯಾಂಕ್‌ಗಳು ಬಂದಿವೆ. ಬಿ.ಎ. ಪದವಿ ಪರೀಕ್ಷೆಯಲ್ಲಿ ಕಾಲೇಜಿನ ವಿದ್ಯಾರ್ಥಿಗಳಾದ ಯು. ಮಮತ 1 ನೇ ರ್‍ಯಾಂಕ್, ಎ. ಸಬಿದಾ 5 ನೇ ರ್‍ಯಾಂಕ್, ನೂರ್ ಆಯಿಷಾ ಖಾನಂ 6 ನೇ ರ್‍ಯಾಂಕ್, ಪಿ.ಕೆ. ಶುಭಶ್ರೀ 7 ನೇ ರ್‍ಯಾಂಕ್ ಗಳಿಸಿದ್ದಾರೆ.

# ಬಾಪೂಜಿ ಎಂಬಿಎ ಕಾಲೇಜಿಗೆ ಫಲಿತಾಂಶ



ದಾವಣಗೆರೆ, ಜ.28- ದಾವಣಗೆರೆ ವಿಶ್ವವಿದ್ಯಾನಿಲಯ ನಡೆಸಿದ ಪರೀಕ್ಷೆಯಲ್ಲಿ ನಗರದ ಬಾಪೂಜಿ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಅಂಡ್ ರಿಸರ್ಚ್- ಎಂಬಿಎ ಕಾಲೇಜಿನ ವಿದ್ಯಾರ್ಥಿ ಎನ್.ಟಿ. ಸಂದೀಪ್ ಅವರು 2 ನೇ ರ್‍ಯಾಂಕ್ ಪಡೆದಿದ್ದಾರೆ.

# ಹರಿಹರಕ್ಕೆ ಕಾಲ್ನಡಿಗೆ ಜಾಥಾ



ದಾವಣಗೆರೆ, ಜ.28- ಕುಂದುವಾಡ ಕೆರೆ ವಾಯು ವಿಹಾರ ಬಳಗದಿಂದ ನಾಡಿದ್ದು ದಿನಾಂಕ 30 ರ ಭಾನುವಾರ ಹರಿಹರಕ್ಕೆ ಕಾಲ್ನಡಿಗೆ ಜಾಥಾ ಹಮ್ಮಿಕೊಳ್ಳಲಾಗಿದೆ.ಅಂದು ಬೆಳಿಗ್ಗೆ 5 ಗಂಟೆಗೆ ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತ (ಬಿಎಸ್‌ಎನ್‌ಎಲ್ ಕಚೇರಿ)ದಿಂದ ಹರಿಹರ ನಗರದ ಇತಿಹಾಸ ಪ್ರಸಿದ್ಧ ಶ್ರೀ ಹರಿಹರೇಶ್ವರ ದೇವಸ್ಥಾನದ ಸನ್ನಿಧಿವರೆಗೆ ನಡೆಯುವ ಜಾಥಾಕ್ಕೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಿಷ್ಯಂತ್ ಚಾಲನೆ ನೀಡಲಿದ್ದಾರೆ.

ಜಾಥಾವು ಮುಕ್ತಾಯವಾದ ನಂತರ ಲಘು ಉಪಾಹಾರ ಏರ್ಪಡಿಸಿದ್ದು, ದಾವಣಗೆರೆಗೆ ವಾಪಸ್ ಬರುವವರಿಗೆ ನಗರದ ಸಪ್ತಗಿರಿ ವಿದ್ಯಾಸಂಸ್ಥೆ, ಸೇಂಟ್ ಜಾನ್ಸ್ ಮತ್ತು ಯುರೋ ಕಿಡ್ಸ್ ಶಾಲೆಗಳು ಬಸ್ಸಿನ ವ್ಯವಸ್ಥೆ ಮಾಡಿವೆ ಎಂದು ಸಂಘಟಕ ಜೆ. ಈಶ್ವರ್‌ಸಿಂಗ್ ಕವಿತಾಳ (9844127137) ತಿಳಿಸಿದ್ದಾರೆ.

# ಎಂ.ಎ. ರಾಜ್ಯಶಾಸ್ತ್ರ ವಿಭಾಗದಲ್ಲಿ ಕುಂಬಳೂರಿನ ಪೂಜಾ ಪ್ರಥಮ ರ್‍ಯಾಂಕ್



ಮಲೇಬೆನ್ನೂರು, ಜ.28- ಕುಂಬ ಳೂರು ಗ್ರಾಮದ ಎಂ.ಎಸ್.ಪೂಜಾ ಅವರು ಎಂ.ಎ ರಾಜ್ಯಶಾಸ್ತ್ರ ವಿಭಾಗದಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ಮೊದಲ ರ್‍ಯಾಂಕ್ ಪಡೆದಿದ್ದಾರೆ. ಪೂಜಾ ಅವರು, ಕುಂಬಳೂರಿನ ಹಿರಿಯರಾದ ಮಾಗಾನಹಳ್ಳಿ ಹಾಲಪ್ಪನವರ ಮೊಮ್ಮ ಗಳು ಹಾಗೂ ಗ್ರಾ.ಪಂ. ಸದಸ್ಯರಾದ ಶ್ರೀಮತಿ ಉಮಾದೇವಿ ಎಂ.ಹೆಚ್. ಶಿವರಾಮಚಂದ್ರಪ್ಪ ದಂಪತಿ ಪುತ್ರಿ.

**ಸನ್ಮಾನ :** ಪ್ರಥಮ ರ್‍ಯಾಂಕ್ ಪುರಸ್ಕೃತರಾದ ಎಂ.ಎಸ್.ಪೂಜಾ ಅವರನ್ನು ಶುಕ್ರವಾರ ಸಂಜೆ ಕುಂಬಳೂರಿನ ಅವರ ಮನೆಯಲ್ಲಿ ಜಿ.ಪಂ. ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ, ಶಿವ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಡಾ. ಬಿ.ಚಂದ್ರಶೇಖರ್, ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ.ಅಬೀದ್ ಅಲಿ, ವರ್ತಕ ತಳಸದ ಬಸವರಾಜ್, ಪುರಸಭೆ ಮಾಜಿ ಸದಸ್ಯ ಎ.ಆರೀಫ್ ಅಲಿ, ಭೋವಿಕುಮಾರ್, ಪಿ.ಹೆಚ್. ಶಿವಕುಮಾರ್, ತಾಹೀರ್, ಸಿವಿಲ್ ಇಂಜಿನಿಯರ್ ಬೆಣ್ಣೆಹಳ್ಳಿ ಶಿವಶಂಕರ್, ಲಿಂಗೇಶ್ವರ ಮೆಡಿಕಲ್ಸ್‌ನ ಎನ್.ಕೆ.ರಾಜೀವ್, ದಾಗಿನಕಟ್ಟೆ ವಾಲ್ಮೀಕಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಜಿ. ಆರ್.ನಾಗರಾಜ್, ಪತ್ರಕರ್ತ ಜಿಗಳಿ ಪ್ರಕಾಶ್ ಮತ್ತಿತರರು ಸೇರಿ ಸನ್ಮಾನಿಸಿ, ಅಭಿನಂದಿಸಿದರು.

# ದಾವಣಗೆರೆ ಸಮಗ್ರ ಅಭಿವೃದ್ಧಿಯತ್ತ : ಎಸ್ಸೆಸ್





ದಾವಣಗೆರೆ, ಜ.28- ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರವು ಸಮಗ್ರ ಅಭಿವೃದ್ಧಿಯತ್ತ ಸಾಗುತ್ತಿದೆ ಎಂದು ಶಾಸಕ ಡಾII ಶಾಮನೂರು ಶಿವಶಂಕರಪ್ಪ ತಿಳಿಸಿದರು.

20ನೇ ವಾರ್ಡಿನ ಭಾರತ್ ಕಾಲೋನಿ ಮತ್ತು 21ನೇ ವಾರ್ಡಿನ ಬಸಾಪುರದಲ್ಲಿ ನಗರ ಪಾಲಿಕೆ ಮಹಾತ್ಮಗಾಂಧಿ ವಿಕಾಸ ಯೋಜನೆಯಡಿ ಸಿ.ಸಿ.ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

15-20 ವರ್ಷಗಳಿಂದ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಹಂತ ಹಂತವಾಗಿ ಕೈಗೊಂಡು ಕ್ಷೇತ್ರದ ಎಲ್ಲಾ ವಾರ್ಡ್, ಗ್ರಾಮಾಂತರ ಪ್ರದೇಶಗಳನ್ನು ಅಭಿವೃದ್ಧಿ ಮಾಡಲಾಗುತ್ತಿದೆ ಎಂದರು.

ಪಾಲಿಕೆ ಸದಸ್ಯರುಗಳಾದ ಮೀನಾಕ್ಷಿ ಜಗದೀಶ್, ಶಿವಲೀಲಾ ಕೊಟ್ರಯ್ಯ, ಪಾಲಿಕೆ ಮಾಜಿ ಸದಸ್ಯ ಬಾ.ಮ. ಬಸವರಾಜಯ್ಯ, ಟಿ.ಡಿ. ಹಾಲೇಶ್, ವೆಂಕಟೇಶ ನಾಯ್ಕ, ಕೆ. ಎಲ್. ಹರೀಶ್, ಅಲೆಕ್ಸಾಂ ಡರ್ (ಜಾನು), ವೀರೇಶ್ ಎಲ್, ಮುನಿ ಸ್ವಾಮಿ, ಆನೆಕೊಂಡ ಗೌಡ್ರು ಅಜ್ಜಪ್ಪ, ಆನೆ ಕೊಂಡ ನಾಗ ರಾಜ್, ಎಸ್.ಸುರೇಂದ್ರಪ್ಪ, ಸಿ. ಮಹೇಶ್ವರಪ್ಪ, ಎಂ.ಎಸ್.ಕೊಟ್ರಯ್ಯ, ನಾಗೇಂದ್ರ ಚಾರ್, ಕಳೂರು ಮಹೇಶ್ವರಪ್ಪ, ಕೆ.ಬಿ.ಲಿಂಗ ರಾಜ್, ದೇವೇಂದ್ರಪ್ಪ, ಕೆ.ಬಿ.ಪ್ರಕಾಶ್, ಶಿವ ಕುಮಾರ್, ಆನೆಕೊಂಡ ಲಿಂಗರಾಜ್, ಬಿ.ಟಿ. ಮರುಳಸಿದ್ದಪ್ಪ, ಎನ್.ಎಂ. ಕೊಟ್ರಯ್ಯ, ವಾಮದೇವಯ್ಯ, ಪಂಚಾಕ್ಷರಯ್ಯ, ಅಕ್ಕಿ ರಾಜು, ಗಿರೀಶ್, ನಿಂಗಪ್ಪ, ಕ್ಯಾಂಪ್‌ನ ನಾಗರಾಜ್, ವೀರೇಶ್, ತಿಪ್ಪೇಶ್, ಹನುಮಂತಪ್ಪ ಮತ್ತು ಇತರರು ಉಪಸ್ಥಿತರಿದ್ದರು.

# ಖಾತೆಯಲ್ಲಿದ್ದ ಹಣ ಕಡಿತ : ಕೃಷಿಕ ಕಂಗಾಲು !

ದಾವಣಗೆರೆ, ಜ.28- ತಮಗೆ ತಿಳಿಯದಂತೆ ಖಾತೆಯಲ್ಲಿದ್ದ ಹಣ ಕಡಿತವಾಗಿರುವುದಾಗಿ ಇಲ್ಲಿನ ಸಿಇಎನ್ ಅಪರಾಧ ಪೊಲೀಸ್ ಠಾಣೆಗೆ ಕೃಷಿಕ ರೋರ್ವರು ದೂರು ನೀಡಿದ್ದಾರೆ.

ನಗರದ ನಿಜಲಿಂಗಪ್ಪ ಲೇಔಟ್ ನ ಎನ್.ಹೆಚ್. ರವಿರಾಜ್ ಅವರು ಬಿಜಾಪುರ ಜಿಲ್ಲೆ ಚಾಲುಕ್ಯ ನಗರದ ಎಸ್‌ಬಿಐ ಬ್ಯಾಂಕ್ ನಲ್ಲಿ ಖಾತೆ ಹೊಂದಿದ್ದು, ಅದರಲ್ಲಿದ್ದ ಒಟ್ಟು 86 ಸಾವಿರ ಕಡಿತವಾಗಿದೆ. ಈ ಬಗ್ಗೆ ಎಸ್ ಬಿಐ ಕ್ರೆಡಿಟ್ ಕಾರ್ಡ್ ನಿಂದ ದೂರವಾಣಿ ಮುಖೇನ ಸಂಪರ್ಕಿಸಿ, ಕ್ರೆಡಿಟ್ ಕಾರ್ಡ್ ನಿಂದ ಓವರ್ ಡ್ಯೂ ಇದೆ ಎಂದರು. ನನ್ನ ಕ್ರೆಡಿಟ್ ಕಾರ್ಡ್ ಬಳಸೇ ಇಲ್ಲ ಹಾಗೂ ಹಣ ಕಡಿತವಾದ ಬಗ್ಗೆ ಮೆಸೇಜ್ ಬಂದಿರಲಿಲ್ಲ. ಎಸ್ ಬಿಐ ಬ್ಯಾಂಕಿನವರು ಬ್ಯಾಂಕ್ ಸ್ಟೇಟ್ ಮೆಂಟ್ ತೆಗೆಸಲು ಹೇಳಿದಂತೆ ಪರಿಶೀಲಿಸಿದಾಗ, ಹಂತ ಹಂತವಾಗಿ ಖಾತೆಯಲ್ಲಿದ್ದ ಹಣ ಕಡಿತವಾಗಿರುವುದು ಗಮನಕ್ಕೆ ಬಂತು ಎಂದು ದೂರಿನಲ್ಲಿ ರವಿರಾಜ್ ತಿಳಿಸಿದ್ದಾರೆ.


## ಭಾವಪೂರ್ಣ ಶ್ರದ್ಧಾಂಜಲಿ



ದಿII ಶ್ರೀ ನರಸಿಂಹಪ್ಪ ಎ.

ಜನನ : 14.03.1949, ಮರಣ : 28.01.2022

ದಿನಾಂಕ : 28.01.2022 ರಂದು ನಿಧನರಾದ ಶ್ರೀ ನರಸಿಂಹಪ್ಪ ಎ. ಇವರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಮತ್ತು ಇವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಇವರ ಕುಟುಂಬಕ್ಕೆ ಭಗವಂತನು ನೀಡಲೆಂದು ಪ್ರಾರ್ಥಿಸುತ್ತೇವೆ...

ರಾಘವೇಂದ್ರ, ಸಮೂಹ ಸಂಸ್ಥೆಗಳು ದಾವಣಗೆರೆ.



II ಶ್ರೀ ಹರಿಹರೇಶ್ವರ ಸ್ವಾಮಿ ಪ್ರಸನ್ನ II II ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ II

## ಶಿವಗಣಾರಾಧನೆ ಆಹ್ವಾನ



ಜನನ : 25.11.1955 ಮರಣ : 17.01.2022

ಶಿವಮೊಗ್ಗ ಜಿಲ್ಲೆ, ಭದ್ರಾವತಿ ತಾಲ್ಲೂಕು ಕೂಡ್ಲಿಗೆರೆ ವಾಸಿಯಾದ

ಶ್ರೀಮತಿ ಓಂಕಾರಮ್ಮ (ದಿII ಎಂ. ಮುರಿಗೆಪ್ಪನವರ ಧರ್ಮಪತ್ನಿ) ಮತ್ತು ಮಕ್ಕಳು

ಇವರು ಮಾಡುವ ವಿಜ್ಞಾಪನೆಗಳು.

ಶ್ರೀಮತಿ ಮಮತಾರವರ ಪತಿಯವರಾದ

ಸನ್ಮಾನ್ಯ ಶ್ರೀ ಎಂ. ನಾಗರಾಜ್‌ರವರು

(ಶ್ರೀ ವಿನಾಯಕ ಬಸ್ ಮಾಲೀಕರು)

ದಿನಾಂಕ : 17.01.2022ನೇ ಸೋಮವಾರ ಮಧ್ಯಾಹ್ನ 1.00 ಗಂಟೆಗೆ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರ ಆತ್ಮಶಾಂತಿಗಾಗಿ ತತ್ಸಂಬಂಧವಾದ

'ಶಿವಗಣಾರಾಧನೆ'ಯನ್ನು

ದಿನಾಂಕ : 29.01.2022ನೇ ಶನಿವಾರ ಬೆಳಿಗ್ಗೆ 11.00ಕ್ಕೆ ಮೃತರ ಸ್ವಗೃಹ ಭದ್ರಾವತಿ ತಾಲ್ಲೂಕು ಕೂಡ್ಲಿಗೆರೆಯಲ್ಲಿ ಶ್ರೀಮದ್ ರಂಭಾಪುರಿ ಜಗದ್ಗುರುಗಳವರ ಇಷ್ಟಲಿಂಗ ಪೂಜೆಯೊಂದಿಗೆ ಏರ್ಪಡಿಸಲಾಗಿದೆ.
ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಇಂತಿ ದುಃಖತಪ್ತರು :

ಶ್ರೀಮತಿ ಮಮತ ಮತ್ತು ಮಕ್ಕಳು, ಅಣ್ಣ-ತಮ್ಮಂದಿರು, ಅಳಿಯಂದಿರು, ಮೊಮ್ಮಕ್ಕಳು ಮತ್ತಿಘಟ್ಟ ವಂಶಸ್ಥರು, ಕೂಡ್ಲಿಗೆರೆ ಗ್ರಾಮಸ್ಥರು, ಮಾರ್ಗದರ್ಶಕರು ಹಾಗೂ ಬಂಧು-ಮಿತ್ರರು

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte